UNIVERSAL
LIBRARY
OU_200056
UNIVERSAL
LIBRARY

ಶ್ರೀ ಶೇಷಾಚಲ

ಸದ್ಬೋಧ ಚಂದ್ರಿಕೆಯ ೨೧ನೇ ವರ್ಷದ

ಕಾಣಿಕೆಯ ಪುಸ್ತಕ.

# ದೈವತಂತ್ರ.

ಲೇಖಕ:—

ರಾ. ತ್ರ್ಯ. ಕರ್ಪೂರ.

ವ್ಯಾ. ಸ. ಚ. ಆನಂದವನ.

ಪ್ರಕಾಶಕ:—

ಯ. ಗು. ಕುಲಕರ್ಣಿ.

ಎಡಿಟರ, ಸ. ಚ. ಆನಂದವನ.

೧೯೨೮

ಬೆಲೆ ೪ ಆಣೆ.] [ಟಿ. ಖ. ಬೇರೆ.

ಆನಂದವನದ ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಭಿ. ಪ. ಕಾಳೆ

ಇವರಿಂದ ಮುದ್ರಿಸಲ್ಪಟ್ಟಿತು.

# ಮುನ್ನುಡಿ.

ನಮ್ಮ ಪ್ರಿಯವಾಚಕರಿಗೆ ಸಾದರಗೊಳಿಸಿದ ಈ ಐತಿಹಾಸಿಕ ಕಥಾನಕವು ಬಹು ಮಹತ್ವದ ಸದ್ಬೋಧವನ್ನು ಮಾಡುತ್ತದೆ. ವಿಜಯನಗರದ ಕೃಷ್ಣದೇವರಾಯನ ಕಾಲವೆಂದರೆ ಕೇವಲ ಕನ್ನಡಿಗರ ಅಭ್ಯುದಯದ ಕಾಲವು. ಇಂಥ ಕಾಲದಲ್ಲಿಯೇ ಶ್ರೀ ಅಪ್ಪಯ್ಯದೀಕ್ಷಿತರೆಂಬ ಮಹಾತ್ಮರು ಅವತರಿಸಿ ಅದ್ವೈತ ಸಾಂಪ್ರದಾಯಕ್ಕೆ ಬಂದಿರುವ ದೂಷಣೆಯನ್ನು ಮಿಥ್ಯಗೊಳಿಸಿ ತಮ್ಮಲ್ಲಿರುವ ಅದ್ವಿತೀಯ ಗುಣಗಳಿಂದ ಜಗಪ್ರಸಿದ್ಧರಾದರು. ಈ ಸಮೀಚೀನವಾದ ಐತಿಹಾಸಿಕ ಕಥಾನಕವನ್ನು ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ-ಶ್ರೀ ದೀಕ್ಷಿತರವರ ಗ್ರಂಥ ಇವುಗಳಾಧಾರದಿಂದ ಕಾದಂಬರೀ ರೂಪದಿಂದ ವಿರಚಿಸಿರುತ್ತದೆ. ಈ ಪುಟ್ಟ ಕಾದಂಬರೀವಾಚನದಿಂದ ಭಿನ್ನ ಭಿನ್ನ ಮತಸಾಂಪ್ರದಾಯದವರು ಸದಸದ್ವಿವೇಕವನ್ನು ತಾಳಿ ಪರಸ್ಪರ ಪ್ರೇಮಾನುಬಂಧಿಗಳಾದರೆ ಲೇಖಕನ ಶ್ರಮವು ಸಫಲವಾಗುವದು. ಶ್ರೀ ಗುರುವು ಇಂಥ ಅಖಂಡಬಂಧುಪ್ರೇಮಲಾಲಸೆಯನ್ನು ನಮ್ಮೆಲ್ಲರಿಗೂ ಒದಗಿಸಿ ಕೊಡಲಿ!!

ಶ್ರೀ ಕ್ಷೇತ್ರ ಆನಂದವನ.
ತಾ|| ೨೮-೨-೨೮

ಸಜ್ಜನ ವಿಧೇಯ,
ರಾ. ತ್ರ್ಯಂ. ಕಪೂರ್ರ.

# ದೈವತಂತ್ರ.

(ಐತಿಹಾಸಿಕ ಕಾದಂಬರಿ.)

## [೧]

ಕಾಂಚೀನಗರದ ವರದರಾಜಸ್ವಾಮಿಯ ಮಂದಿರದ ಮನೋಹರವಾದ ಸರೋವರವು. ಸಾಯಂಸಂಧ್ಯಾಸಮಯದಲ್ಲಿ ಭಗವಾನ್‌ಸೂರ್ಯನಾರಾಯಣನ ಕೆಂಪುಕಿರಣಗಳ ಛಾಯೆಯು ನೀರ ಮೇಲೆ ಬಿದ್ದದ್ದರಿಂದ ವರ್ಣನಾತೀತವಾದ ಶೋಭೆಯುಂಟಾಗಿದೆ. ಚಿತ್ರವಿಚಿತ್ರ ಬಣ್ಣಗಳಿಂದೊಪ್ಪುವ ವಿಮಾನಗಳಿಂದ ಪ್ರೇಕ್ಷಕರ ಮನರಂಜನೆಯಾಗತೊಡಗಿದೆ. ಸರೋವರದ ಮೇಲಿನ ಶೀತಲಸುಳಿಗಾಳಿಯಿಂದ ಆ ಪ್ರದೇಶದ ಮನೋಹರತೆಯು ಮತ್ತಷ್ಟು ಹೆಚ್ಚುತ್ತಲಿದೆ. ವೈಶಾಖಮಾಸದ ಒಳ್ಳೇ ಬಿಸಿಲುಗಾಲವಾದ್ದರಿಂದ ಬಿಸಿಲಿನತಾಪದಿಂದ ಕಳವಳಗೊಂಡ ಜನರು ಸರೋವರದ ತೀರದಲ್ಲಿ ಬಂದು ಸುಖಸಮಾಧಾನಗಳನ್ನು ಅನುಭವಿಸತೊಡಗಿದ್ದಾರೆ.

ಇಂಥ ಸುಖಪ್ರದವಾದ ಆ ಸರೋವರತೀರಕ್ಕೆ ಒಬ್ಬ ಪ್ರತಿಷ್ಠಿತ ಮನುಷ್ಯನು ಬಂದನು. ಅವನು ಗಂಭೀರಪುರುಷನಾಗಿದ್ದನು. ಅವನ ಮುಖದ ಮೇಲೆ ವಿದ್ಯಾತೇಜವು ವಿರಾಜಿಸುತ್ತಿತ್ತು. ಅವನು ಮಧ್ಯಮವಯಸ್ಸಿನವನಾಗಿದ್ದನು. ಅವನ ವಿಶಾಲವಾದ ಹಣೆಯಲ್ಲಿರುವ ತ್ರಿನಾಮವು ಅವನು ರಾಮಾನುಜಪಂಥೀಯನೆಂಬದನ್ನು ಸಾರಿಹೇಳುತ್ತಿತ್ತು. ಅವನ ಸಂಗಡ ಬೇರೆ ನಾಲ್ಕು ಜನರಿದ್ದರು. ಅವರು ಆ ಪ್ರತಿಷ್ಠಿತ ಗೃಹಸ್ಥನ ಶಿಷ್ಯರಾಗಲಿ, ಸೇವಕರಾಗಲಿ ಇರಬಹುದೆಂದು ತೋರುತ್ತಿತ್ತು. ಆ ಗೃಹಸ್ಥನು ಸರೋವರದಲ್ಲಿಳಿದು ಕೈಕಾಲು ಮೋರೆಗಳನ್ನು ತೊಳೆದು ಧೌತವಸ್ತ್ರದಿಂದ ಒರಿಸಿಕೊಂಡು ಸೇವಕರು ಪ್ರಶಸ್ತವಾದ ಒಂದು ಕಲ್ಲುಮಂಟಪದಲ್ಲಿ ಸಿದ್ಧಪಡಿಸಿದ ಆಸನದಲ್ಲಿ ಕುಳಿತು ಸಂಧ್ಯಾಕಾರ್ಯವನ್ನು ನೆರವೇರಿಸಿದನು. ಬಳಿಕ ಅವನು ಹಾಗೇ ಆ ಆಸನದ

ಮೇಲೆ ಕೆಲಹೊತ್ತಿನ ವರೆಗೆ ಮೌನದಿಂದ ಕುಳಿತುಕೊಂಡನು. ಆ ಪ್ರದೇಶದ ಪ್ರಶಾಂತತೆಯಿಂದ ಆತನ ಮನಸ್ಸು ಸುಪ್ರಸನ್ನವಾಗಿತ್ತು. ಕೆಲಹೊತ್ತಿನಮೇಲೆ ಆತನ ಆ ಸುಪ್ರಸನ್ನ ಮನಸ್ಸಿನಲ್ಲಿ ಒಂದು ವಿಚಾರವು ಮೈದೋರಿತು ಏನೆಂದರೆ—

"ನಾನು ಇಷ್ಟು ದೊಡ್ಡ ಪಂಡಿತನಾದದ್ದರ ಪ್ರಯೋಜನವೇನು? ನನಗೆ ಎದುರಾಗಲು ಸಮರ್ಥನಾದ ಯಾವ ಪಂಡಿತನೂ ಇರುವದಿಲ್ಲ. ನಾನು ಇದು ವರೆಗೆ ಹಲವು ಜನ ಪಂಡಿತರನ್ನು ಸೋಲಿಸಿ ಜಯಪತ್ರಗಳನ್ನು ಸಂಪಾದಿಸಿದ್ದೇನೆ. ತಾತಾಚಾರ್ಯನೆಂಬ ನನ್ನ ಹೆಸರನ್ನು ಕೇಳಿದಾಕ್ಷಣವೇ ಪಂಡಿತಮಂಡಲಿಯ ಹಲ್ಲಣವು ಹಾರಿಹೋಗುವದು. ಹೀಗೆ ನನ್ನ ಘನತೆಯು ಸರ್ವತೋಮುಖ ವಾಗಿ ಆಗಿದ್ದರೂ ನನ್ನಿಂದ ಆಗಬೇಕಾಗಿದ್ದ ಕೆಲಸವು ಮಾತ್ರ ಇನ್ನೂ ಆಗಲಿಲ್ಲ. ನನ್ನೀಮಹತ್ವಾಕಾಂಕ್ಷೆಯು ಪೂರ್ಣವಾಗಿ ನೆರವೇರಲಿಕ್ಕೆ ನನ್ನ ಗುರುವಿನ ಮಗ ನೊಬ್ಬನು ನನಗೆ ಅಡ್ಡಬರುತ್ತಿದ್ದಾನೆ. ದುರ್ದೈವದಿಂದ ಆತನಷ್ಟು ಪ್ರತಿಭೆಯು ನನಗೆ ಉಂಟಾಗಲಿಲ್ಲ. ಆತನೊಬ್ಬನ ವಿನಃ ನನಗೆ ಭೂಮಂಡಲದಲ್ಲಿ ಯಾರೂ ಎದುರಿಲ್ಲ. ಆದರೆ ಆ ನನ್ನ ಪ್ರತಿಸ್ಪರ್ಧಿಯಾದ ಅಪ್ಪಯ್ಯ ದೀಕ್ಷಿತನನ್ನು ಸೋಲಿ ಸುವ ಬಗೆ ಹ್ಯಾಗೆ? ವಿದ್ಯಾಭ್ಯಾಸ ಮಾಡುವಾಗಲೇ ಅವನ ಪ್ರತಿಭೆಯನ್ನು ನೋಡಿದ್ದೇನೆ. ಆತನು ಹದಿನಾರು ವರುಷದವನಿರುವಾಗಲೇ ನಮ್ಮ ವಿಶಿಷ್ಟಾ ದ್ವೈತಸಿದ್ಧಾಂತಗಳನ್ನು ಸಪ್ರಮಾಣವಾಗಿ ಖಂಡಿಸುವಂಥ ಗ್ರಂಥಗಳನ್ನು ರಚಿಸಿ ರುವನು. ಜನರು ಮಾತನಾಡಿಕೊಳ್ಳುವಂತೆ ಅವನು ಪ್ರತ್ಯಕ್ಷ ಪರಮೇಶ್ವರನೇ ಇರಬಹುದು. (ಸ್ವಲ್ಪ ಯೋಚಿಸಿ) ಅಹಾ! ನಾನೆಂಥ ಮೂರ್ಖನು? ಮುಗ್ಧಜನ ರಂತೆ ನಾನೂ ಆ ಶೈವ ಅಪ್ಪಯ್ಯನಿಗೆ ಪರಮೇಶ್ವರನೆಂದು ಅಂದು ಬಿಟ್ಟೆನಲ್ಲ? ಛೀ, ಸ್ವಲ್ಪ ವಿದ್ಯಾವಂತನಾದ ಮಾತ್ರಕ್ಕೆ ಪರಮೇಶ್ವರನಾಗಬಲ್ಲನೇ? (ಪೌರು ಷವ್ಯ ತಾಳಿ) ನಾನು ಹೀಗೆ ಹೆದರಿದರೆ ನನ್ನ ಮಹತ್ವಾಕಾಂಕ್ಷೆಯು ಈಡೇರುವ ಬಗೆ ಹ್ಯಾಗೆ? ಅಪ್ಪಯ್ಯನಿರಲಿ ಅಪ್ಪಯ್ಯನಪ್ಪನಿರಲಿ, ನಾನು ಅಂಜುವ ಕಾರಣ ವಿಲ್ಲ. ಅಪ್ಪಯ್ಯನಪ್ಪನು ನನಗೆ ವಿದ್ಯಾಗುರುವಾಗಿದ್ದರೂ ಈಗ ನಾನು ವಿಶಿ ಷ್ಟಾದ್ವೈತ ಮತಪ್ರವರ್ತಕನಾದ್ದರಿಂದ ನನಗೆ ಆ ವಿದ್ಯಾಗುರುವಿನ ಸಂಬಂಧವು ಉಳಿಯಲಾರದು. ನಾನು ವಿಶಿಷ್ಟಾದ್ವೈತಮತದ ಕಟ್ಟಾಭಕ್ತನು. ಆ ಮತ ಪ್ರಸಾರವನ್ನು ಮಾಡಲಿಕ್ಕೆ ಪ್ರತಿಜ್ಞೆ ಮಾಡಿದವನು; ಚೈತನ್ಯ ದೇವರದಯದಿಂದ ನನಗೆ ಆ ಯೋಗ್ಯತೆಯು ಬಂದಿರುವದು. ನಾನು ಇನ್ನೆಷ್ಟು ದಿನ ಸುಮ್ಮನೆ ಕೂಡ್ರಬೇಕು? ಚೈತನ್ಯದೇವರ ದಯದಿಂದ ಅಪ್ಪಯನನ್ನು ನಾನು ಸೋಲಿಸ

ಬಹುದು. ಆದರೆ ಒಮ್ಮೆಲೆ ಅಪ್ಪಯ್ಯನಿದ್ದಲ್ಲಿ ನನ್ನ ಕಾರ್ಯಕ್ಷೇತ್ರವನ್ನು ಕಲಿಸಬಾರದು. ದೂರದೇಶಕ್ಕೆ ಹೋಗಿ ಅಲ್ಲಿ ನನ್ನ ಪ್ರಖ್ಯಾತಿಯನ್ನು ಕೆಡವಬೇಕು.

ಈ ಮೇರೆಗೆ ತಾತಾಚಾರ್ಯನು ಯೋಚಿಸುತ್ತಿರಲು ಅಲ್ಲಿಗೆ ಆತನ ಸಹಾಧ್ಯಾಯಿಯೊಬ್ಬನು ಬಂದನು. ಆಗ ತಾತಾಚಾರ್ಯನು ಪ್ರೇಮಪೂರ್ವಕವಾಗಿ ಆತನ ಸ್ವಾಗತಮಾಡಿ ಕ್ಷೇಮಸಮಾಚಾರಗಳನ್ನು ಕೇಳಿದನಂತರ ತನ್ನ ನಲ್ಲಿದ್ದ ಮಹತ್ವಾಕಾಂಕ್ಷೆಯನ್ನು ಬಾಯಿಬಿಚ್ಚಿ ಹೇಳಿದನು. ಆ ಸಹಾಧ್ಯಾಯಿಯು ತಾತಾಚಾರ್ಯರ ಈ ಮಹತ್ವಾಕಾಂಕ್ಷೆಯನ್ನು ಬಹಳವಾಗಿ ಕೊಂಡಾಡಿ ನಿಮ್ಮಂಥ ಪ್ರಸಿದ್ಧವಿದ್ವಾಂಸರು ಮುಂದರಿಯದಿದ್ದರೆ ನಮ್ಮ ಶ್ರೀವೈಷ್ಣವ ಸಾಂಪ್ರದಾಯವು ಬೆಳೆಯುವದು ಹ್ಯಾಗೆ? ನೀವು ಅವಶ್ಯ ಮಾಡಬೇಕಾದುದು. ಎಂದು ತುಂಬಾ ಪ್ರೋತ್ಸಾಹಿಸಿದನು. ಸ್ನೇಹಿತನ ಶ್ಲಾಘನಯಿಂದ ತಾತಾಚಾರ್ಯರಿಗೆ ಹೆಚ್ಚು ಹುರುಪು ಬಂದಿತು. ಎಲ್ಲೆಲ್ಲಿಯೂ ವಿಶಿಷ್ಟಾದ್ವೈತ ಮತವನ್ನೇ ಪ್ರಸಾರಗೊಳಿಸಿ ಜಯಭೇರಿಯನ್ನು ಹೊಡಿಸಬೇಕೆಂದು ಮನಸಿನಲ್ಲಿ ಹಂಚಿಕೆ ಹಾಕಲಾರಂಭಿಸಿದನು. ಭರತಖಂಡದೊಳಗಿನ ಬ್ರಾಹ್ಮಣ ವರ್ಗದಲ್ಲಿರುವ ಮಿಕ್ಕಮತಗಳೆಲ್ಲ ಅವನಿಗೆ ಕ್ಷುದ್ರವಾಗಿ ತೋರತೊಡಗಿದವು. ಭರತಖಂಡವನ್ನೆಲ್ಲ ವಿಶಿಷ್ಟಾದ್ವೈತ ಮತವೇ ವ್ಯಾಪಿಸಬೇಕೆಂಬ ಅವನ ಮಹತ್ವಾಕಾಂಕ್ಷೆಯು ಕುಡಿಯಿಟ್ಟಿತು. ಆಗ ಆತನು ಸ್ನೇಹಿತನೊಡನೆ ರಹಸ್ಯವಾಗಿ ಆಲೋಚಿಸಿ ಉತ್ತರದಿಕ್ಕಿಗೆ ದಿಗ್ವಿಜಯ ಬೆಳಸಬೇಕೆಂದು ನಿರ್ಧರಿಸಿ ಸ್ನೇಹಿತನೊಡನೆ ನಿವಾಸಸ್ಥಾನದ ಕಡೆಗೆ ತೆರಳಿದನು.

## [೨]

ವಿಜಯನಗರ ಸಾಮ್ರಾಜ್ಯವು ಒಳ್ಳೇ ಘನತೆಗೇರಿತ್ತು. ಕೃಷ್ಣದೇವರಾಯನು ಸ್ವಪರಾಕ್ರಮದಿಂದ ಸಾಮ್ರಾಜ್ಯದ ವಿಸ್ತಾರವನ್ನು ಹೆಚ್ಚಿಸಿದ್ದನು. ಆತನು ವಿದ್ವಾಂಸನೂ, ವಿದ್ಯಾಪಕ್ಷಪಾತಿಯೂ ಆಗಿದ್ದನು. ಆತನ ಆ ಸ್ಥಾನವು ಪಂಡಿತೋತ್ತಮರಿಂದ ಸುಶೋಭಿತವಾಗಿತ್ತು. ರಾಜನು ಕುಲಪರಂಪರಾಗತವಾದ ಶೈವಸಾಂಪ್ರದಾಯವನ್ನನುಸರಿಸಿ ನಡೆಯುತ್ತಿದ್ದನು. ಅದ್ವೈತಮತಾವಲಂಬಿಯಾದ ಆತನು ಯಾವ ಮತದ ಪಂಡಿತರನ್ನೂ ಅವಮಾನಗೊಳಿಸುತ್ತಿರಲಿಲ್ಲ. ಆದ್ದರಿಂದ ಆತನ ಆ ಸ್ಥಾನದಲ್ಲಿ ಸ್ಮಾರ್ತ-ವೈಷ್ಣವಾದಿಮತಗಳ ಪಂಡಿತೋತ್ತಮರು ಸರಿಯಾಗಿಯೇ ಗೌರವವನ್ನು ಹೊಂದುತ್ತಿದ್ದರು.

ವಿಜಯನಗರದ ಸಾಮ್ರಾಜ್ಯವು ಶ್ರೀವಿದ್ಯಾರಣ್ಯರ ತಪಸ್ಸಿನ ಫಲವಾದ್ದರಿಂದ ಆ ಸಾಮ್ರಾಜ್ಯದ ಗುರುತ್ವವು ಶ್ರೀವಿದ್ಯಾರಣ್ಯರನ್ನೇ ಆಶ್ರಯಿಸಿತ್ತು. ಶ್ರೀವಿದ್ಯಾರಣ್ಯರು ಅದ್ವೈತಸಿದ್ಧಾಂತ ಸ್ಥಾಪಕಜಗದ್ಗುರುಗಳಾದ್ದರಿಂದ ಸಾಮ್ರಾಜ್ಯಾಧಿಪತಿಗಳಿಗೆ ಅವರ ಆಜ್ಞೆಯಂತೆ ಹಂಪೆಯ ಶ್ರೀ ವಿರೂಪಾಕ್ಷೇಶ್ವರನೇ ಇಷ್ಟದೈವತನಾಗಿದ್ದನು. ಕೃಷ್ಣದೇವರಾಯನು ಶ್ರೀ ವಿರೂಪಾಕ್ಷೇಶ್ವರನ ವೈಭವವನ್ನು ಬಹಳವಾಗಿ ಹೆಚ್ಚಿಸಿದ್ದನು. ಶಿವೋಪಾಸನೆಯು ಅತ್ಯಧಿಕವಾಗಿ ನಡೆಯುತ್ತಿತ್ತು. ರಾಜನು ಶೈವನಾದ್ದರಿಂದ ಆತನ ಬಳಿಯಲ್ಲಿ ಶೈವರ ಸುಳಿದಾಟವು ಹೆಚ್ಚುವದು ಸ್ವಾಭಾವಿಕವಾದದ್ದೇಸರಿ! ದೊಡ್ಡದೊಡ್ಡ ಶೈವಪಂಡಿತರು ರಾಜನನ್ನಾಶ್ರಯಿಸಿದ್ದರು. ರಾಜನು ವಿದ್ಯಾಪಕ್ಷಪಾತಿಯಾದ್ದರಿಂದ ಪ್ರತಿದಿನದಲ್ಲೂ ಸಭೆಯಲ್ಲಿ ಶಾಸ್ತ್ರಚರ್ಚೆಯನ್ನೂ ಮತಸಿದ್ಧಾಂತಗಳ ಚರ್ಚೆಯನ್ನೂ ನಡೆಯಿಸುತ್ತಿದ್ದನು. ರಾಜನು ಶೈವನಾದ್ದರಿಂದಲೂ ಶೈವಪಂಡಿತರ ಸಂಖ್ಯೆಯು ಆ ಸ್ಥಾನದಲ್ಲಿ ವಿಶೇಷವಾಗಿದ್ದದರಿಂದಲೂ ಶೈವೇತರಪಂಡಿತರ ಆಟ ಸಾಗುತ್ತಿರಲಿಲ್ಲ. ಆದರೆ ಶೈವಪಂಡಿತರಾಗಲಿ, ರಾಜನಾಗಲಿ ಶೈವೇತರ ಪಂಡಿತರನ್ನು ತಿರಸ್ಕರಿಸುತ್ತಿದ್ದಿಲ್ಲ. ಸರ್ವರೂ ವಿದ್ಯೆಗೆ ತಕ್ಕಗೌರವವನ್ನು ಹೊಂದುತ್ತಿದ್ದರು.

ಇಂತು ಕೃಷ್ಣದೇವರಾಜನ ಆ ಸ್ಥಾನವು ಸಕಲ ಪಂಡಿತರಿಗೂ ಸುಖನಿವಾಸಸ್ಥಾನವಾಗಿರಲು ಒಂದು ದಿನ ಪಂಡಿತರ ಸಭೆಯು ಕೂಡಿದಾಗ ಒಬ್ಬ ಬ್ರಾಹ್ಮಣನು ಸಭೆಯನ್ನು ಪ್ರವೇಶಿಸಿ ರಾಜನಿಗೆ ಪ್ರಣಾಮ ಮಾಡಿ ರಾಜಗೌರವವನ್ನು ಹೊಂದಿ ಆಸನದ ಮೇಲೆ ಕುಳಿತುಕೊಂಡನು. ಬಳಿಕ ರಾಜನು ಆ ಬ್ರಾಹ್ಮಣನ ಯೋಗಕ್ಷೇಮವನ್ನು ಕೇಳಲು ಆತನು ಆಸನದಿಂದೆದ್ದು ಸಭೆಯನ್ನವಲೋಕಿಸುತ್ತ ಬಹು ವಿನಯದಿಂದ ಆದರೆ ಗಾಂಭೀರ್ಯದಿಂದ ರಾಜನ ಬಳಿಗೆ ಹೋಗಿ ಒಂದು ಪತ್ರವನ್ನು ಕೊಟ್ಟನು. ಮತ್ತು "ನಾನು ತಾತಾಚಾರ್ಯರೆಂಬ ಜಗದ್ವಿಖ್ಯಾತ ಪಂಡಿತರ ಶಿಷ್ಯನು; ನಮ್ಮ ಗುರುಗಳು ದಿಗ್ವಿಜಯಕ್ಕಾಗಿ ಹೊರಟಿದ್ದು ಅನೇಕ ಜನ ಪಂಡಿತರನ್ನು ಸೋಲಿಸುತ್ತ ಈಗ ಬಳ್ಳಾರಿಯ ವರೆಗೆ ಒಂದಿರುತ್ತಾರೆ. ಹೀಗೆ ದಿಗ್ವಿಜಯ ಮಾಡುತ್ತ ತಮ್ಮ ಆ ಸ್ಥಾನದ ವರೆಗೂ ಬರುವ ವಿಚಾರವನ್ನು ಮಾಡಿದ್ದಾರೆ. ಈ ಸಂಗತಿಯನ್ನು ಬಿನ್ನವಿಸುವದಕ್ಕಾಗಿ ಆ ಸ್ಥಾನಕ್ಕೆ ಬಂದಿದ್ದೇನೆ" ಎಂದು ನುಡಿದನು. ಆತನ ಆ ಮಾತುಗಳನ್ನು ಕೇಳಿ ಶೈವ ಪಂಡಿತರಲ್ಲಿ ಕೆಲವರ ಮುಖಲಕ್ಷಣವು ಬದಲಿಸಿತು. ಕೆಲವರು ಹರುಷಗೊಂಡರು. ಆ ಸ್ಥಾನದಲ್ಲಿದ್ದ ಶ್ರೀ ವೈಷ್ಣವ ಪಂಡಿತರಿಗಂತೂ ವೈಕುಂಠವು ಮೂರೇ ಬೆರಳು ಉಳಿಯಿತು.

ತಾತಾಚಾರ್ಯರ ಹೆಸರು ಸರ್ವ ವಿಶ್ರುತವಾಗಿತ್ತು. ಆತನ ಪಾಂಡಿತ್ಯವು ಅಸಾಧಾರಣವಾಗಿರುವದೆಂಬದನ್ನು ಕೃಷ್ಣದೇವರಾಜನೂ ಆತನ ಆಸ್ಥಾನದಲ್ಲಿಯ ಪಂಡಿತರೂ ಕೇಳಿ ತಿಳಿದಿದ್ದರು. ಆ ಸ್ಥಾನದಲ್ಲಿಯ ಶೈವ ಪಂಡಿತರ ಯೋಗ್ಯತೆ ಯಾದರೂ ಕಡಿಮೆಯುದಿದ್ದಿಲ್ಲ. ತಾತಾಚಾರ್ಯರಂಥ ಪ್ರತಿಭಾಸಂಪನ್ನರು ಕೆಲಜನರಿದ್ದರು. ಅವರೆಲ್ಲರಿಗೂ, ತಾತಾಚಾರ್ಯರು ನಮ್ಮಿಂದ ಪರಾಜಿತ ರಾದರೆ ನಮ್ಮ ಕೀರ್ತಿಯು ದಿಗಂತವಾಗಿ ಹಬ್ಬುವದೆಂಬ ಸಂತೋಷವು ಹೆಚ್ಚಿತು, ಕೃಷ್ಣದೇವರಾಜನು ತಾತಾಚಾರ್ಯರ ಶಿಷ್ಯನಿಗೆ ತಕ್ಕ ಗೌರವವನ್ನು ಮಾಡಿ ಅವಶ್ಯವಾಗಿ ದಯಮಾಡಿಸಬೇಕೆಂದು ಅಪ್ಪಣೆಕೊಟ್ಟು ಕಳುಹಿಸಿದನು. ತಾತಾಚಾರ್ಯರ ಶಿಷ್ಯನು ಬಂದುಹೋದ ಬಳಿಕ ಆ ಸ್ಥಾನದಲ್ಲಿಯ ಶೈವ ಪಂಡಿತರಲ್ಲಿ ವಿಲಕ್ಷಣ ಜಾಗ್ರತಿಯು ಕಂಡು ಬರತೊಡಗಿತು. ತಾತಾಚಾರ್ಯರು ಸಾಮಾನ್ಯರಲ್ಲ ಮೇಲಾಗಿ ಅವರು ಮತಸಿದ್ಧಾಂತವಾದಿಗಳು. ವಿಶಿಷ್ಟಾದ್ವೈತ ಮತ ಸಿದ್ಧಾಂತಕ್ಕಾಗಿ ಟೊಂಕಕಟ್ಟಿದವರು. ಇಂಥವರು ಆ ಸ್ಥಾನಕ್ಕೆ ಬಂದರೆ ಅವರು ಉಳಿದ ಶಾಸ್ತ್ರಚರ್ಚೆಯ ಗೊಡವೆಗೆ ಹೋಗದೆ ಮತತತ್ವಗಳ ಚರ್ಚೆಯನ್ನೇ ಆರಂಭಿಸುವರು. ಇಂಥವರೊಡನೆ ವಾದಮಾಡುವ ಪ್ರಸಂಗವಿದ್ದದರಿಂದ ಆ ಸ್ಥಾನದ ಪಂಡಿತರು ಅಷ್ಟೊಂದು ಜಾಗ್ರತೆಯನ್ನು ತಾಳಬೇಕಾಯಿತು.

ತಾತಾಚಾರ್ಯರು ಅತ್ಯಂತ ಮಹತ್ವಾಕಾಂಕ್ಷಿಗಳು. ವಿಶಿಷ್ಟಾದ್ವೈತ ಮತದ ಹೆಚ್ಚಳವನ್ನು ಮನವುಟ್ಟಿ ಬಯಸುವ ಅವರು ತಮ್ಮ ಈ ಕೃತಿಯಿಂದ ಅನ್ಯ ಮತಸ್ಥರಿಗೆ ಎಷ್ಟು ಹಿಂಸೆಯಾಗುತ್ತದೆಂಬದನ್ನು ಲಕ್ಷಿಸುತ್ತಿರಲಿಲ್ಲ. ವಿಶಿ ಷ್ಟಾದ್ವೈತಮತವು ಪ್ರಸಾರವಾದರೆ ತಮ್ಮ ಕೆಲಸವಾಯಿತೆಂದು ಅವರು ತಿಳಿಯು ತ್ತಿದ್ದರು. ಸ್ವಮತವು ಶ್ರೇಷ್ಠವೆಂದು ತಿಳಿಯುವದು ಪ್ರತಿಯೊಬ್ಬನಿಗೆ ಅವಶ್ಯ ವಿದ್ದರೂ ಅನ್ಯಮತದವರ ದೂಷಣೆಮಾಡಕೂಡದೆಂಬ ವಿಚಾರವು ತಾತಾಚಾರ್ಯ ರಿಗೆ ಎಷ್ಟು ಮಾತ್ರಕ್ಕೂ ಹೊಳೆದಿರಲಿಲ್ಲ. ಅವರು ತಮ್ಮ ಈ ಕಾರ್ಯದಲ್ಲಿ ಅತ್ಯಂತ ದಕ್ಷರಾಗಿದ್ದರು. ಪರಮತೀಯ ಪ್ರತಿಪಕ್ಷಿಗಳನ್ನು ಪರಾಭವಗೊಳಿಸಿ, ಕೂಡಲೆ ಅವರಿಗೆ ತಮ್ಮ ಮತದೀಕ್ಷೆಯನ್ನು ಕೊಡಲು ಹವಣಿಸುತ್ತಿದ್ದರು. ಕೆಲವರು ಅವರ ವಿದ್ಯಾಪ್ರಭಾವಕ್ಕೆ ಮೆಚ್ಚಿ ವಿಶಿಷ್ಟಾದ್ವೈತಿಗಳಾಗಲು ಒಪ್ಪಿ ಕೊಳ್ಳುತ್ತಿದ್ದರು. ಕೆಲವರು ನೋರೆತಪ್ಪಿಸಿ ಪಾರಾಗುತ್ತಿದ್ದರು. ಕೆಲವರು ಖಂಡಿತವಾದಿಗಳು ನಮ್ಮಕ್ಕಿಂತಲೂ ನೀವು ವಿದ್ಯಾವಂತರಾದ್ದರಿಂದ ನಿಮ್ಮ ಮೇಲೆ ಕೋಟಿಯನ್ನು ಮಾಡಲಿಕ್ಕೆ ನಮಗೆ ಸಾಧ್ಯವಿಲ್ಲ. ಆದರೆ ನಮ್ಮ

ಇಷ್ಟೊಂದು ಪ್ರತಿಭಾಶಕ್ತಿಯು ಇಲ್ಲದ ಮಾತ್ರಕ್ಕೆ ನಮ್ಮ ಮತವೇ ತ್ಯಾಗಾರ್ಹ ವೆಂದು ನಾವು ಭಾವಿಸಲಾರೆವು. ಆದ್ದರಿಂದ ನಿಮ್ಮ ಮತಾವಲಂಬಿಗಳೆಂದಿಗೂ ಆಗಲಾರೆವು ಎಂದು ಹೇಳುತ್ತಿದ್ದರು.

ಈ ಕ್ರಮವು ಅಖಂಡವಾಗಿ ನಡೆದಿತ್ತು. ಆದರೆ ತಾತಾಚಾರ್ಯರ ಮುಖ್ಯ ಕಾರ್ಯಕ್ರಮವು ವಿಜಯನಗರದ ಆಸ್ಥಾನದಲ್ಲಿ ನಡೆಯಬೇಕಾದ್ದರಿಂದ ಅವರು ಶೀಘ್ರಗತಿಯಿಂದ ವಿಜಯನಗರದ ಸಮೀಪಕ್ಕೆ ಬಂದು ರಾಜನಿಗೆ ವರದಿಯನ್ನು ಕಳಿಸಿದರು. ಆಗ ಕೃಷ್ಣದೇವರಾಯನು ಮಂತ್ರಿಗಳನ್ನೂ ರಾಜಕೀಯ ಸರಂ-ಜಾಮನ್ನೂ ಕಳಿಸಿ ಅವರನ್ನು ಸರಿಯಾದ ಮನ್ನಣೆಯಿಂದ ರಾಜಧಾನಿಗೆ ಕರೆಯಿಸಿಕೊಂಡು ಯೋಗ್ಯ ಬಿಡಾರದಲ್ಲಿಳಿಸಿದನು.

ಆಗ ವಿಜಯನಗರದಲ್ಲಿ ಶೈವವೈಭವವು ಶಿಖರಕ್ಕೆ ಮುಟ್ಟಿತ್ತೆಂದರೆ ತಪ್ಪಾಗದು. ಎಲ್ಲೆಲ್ಲಿ ನೋಡಿದರೂ ಶಿವೋಪಾಸಕರು. ಅದ್ವೈತಸಿದ್ಧಾಂತದ ಪಾಠ ಪ್ರವಚನಗಳು. ವಿರೂಪಾಕ್ಷನ ವೈಭವಕ್ಕಂತೂ ಮೇರೆಯಿಲ್ಲ. ಇವೆಲ್ಲ ಪ್ರಕಾರ ವನ್ನು ಪ್ರತ್ಯಕ್ಷ ಕಂಡು ತಾತಾಚಾರ್ಯರಿಗೆ ವಿಲಕ್ಷಣ ಸಂತಾಪವಾಯಿತು. ಹ್ಯಾಗಾದರೂ ಮಾಡಿ ನನ್ನ ವಿದ್ಯಾಪ್ರಭಾವದಿಂದ ಕೃಷ್ಣದೇವರಾಯನನ್ನು ಅಧೀನಪಡಿಸಿಕೊಂಡರೆ ಈ ಶೈವವೈಭವವನ್ನು ಬೊಕ್ಕಬೋರಲು ಹಾಕಲಿಕ್ಕೆ ಸ್ವಲ್ಪವೂ ವಿಲಂಬವಾಗುವದಿಲ್ಲ. ಎಂದು ಮನಸ್ಸಿನಲ್ಲಿಯೇ ಘಾಸಿಯಾಗತೊಡಗಿದರು. ವಿಜಯನಗರದ ರಾಜರು ಶಿವೋಪಾಸಕರೆಂದು ಕೇಳಿ ತಿಳಿದಿದ್ದರು. ಆದರೆ ಶಿವೋಪಾಸನೆಯು ನಖಶಿಖಾಂತವಾಗಿ ವ್ಯಾಪಿಸಿದೆಯೆಂಬದು ಅವರಿಗೆ ಗೊತ್ತಿರಲಿಲ್ಲ. ಪ್ರತ್ಯಕ್ಷ ದರ್ಶನದಿಂದ ದಂಗುಬಡಿದು ಹೋಯಿತು. ಇಷ್ಟೊಂದು ಘನತರ ಶಿವೋಪಾಸಕ ರಾಜನನ್ನು ನಮ್ಮ ಮತಕ್ಕೆ ಒಲಿಸಿಕೊಳ್ಳುವಬಗೆಹ್ಯಾಗೆ? ನನ್ನ ಪೌರುಷವು ಇಲ್ಲಿ ವ್ಯರ್ಥವಾಗಬಹುದೇನೆಂಬ ವಿಚಾರವು ಕೂಡಾ ಅವರಲ್ಲಿ ಬಂದು ಹೋಯಿತು. ಆದರೆ ಆ ಸ್ವಾವಲಂಬಿಯು ಇಂಥ ಕ್ಷುದ್ರವಿಚಾರಗಳಿಗೆ ಸೊಪ್ಪುಹಾಕಲಿಲ್ಲ. ತನ್ನ ಅಗಾಧ ಪಾಂಡಿತ್ಯದಿಂದ ಇಂಥ ಏಕನಿಷ್ಠ ಶಿವೋಪಾಸಕನನ್ನಾದರೂ ನನ್ನ ಕೈವಶಮಾಡಿಕೊಳ್ಳುವೆನೆಂಬ ಆತ್ಮವಿಶ್ವಾಸವು ಅವನಲ್ಲುಂಟಾಯಿತು. ಆಗ ಆತನು—ಇಂಥ ರಾಜನಲ್ಲಿ ಪೌರುಷ ಪ್ರಕಟಮಾಡಿದರೇ ನನ್ನ ಹೆಸರು ತಾತಾಚಾರ್ಯ ಎಂದು ಪ್ರತಿಜ್ಞೆ ಮಾಡಿದನು.

## [೨]

ರಾಜಧಾನಿಯಲ್ಲಿ ತಾತಾಚಾರ್ಯರ ಆತಿಥ್ಯವು ನಡೆಯಿತು. ಪದ್ಧತಿಯಂತೆ ರಾಜನು ಪಂಡಿತರ ದರ್ಬಾರವನ್ನು ನೆರೆಯಿಸಿದನು. ಆ ಸ್ಥಾನದ ಪಂಡಿತರೆಲ್ಲರೂ ತಮತಮಗುಚಿತ ಆಸನದಲ್ಲಿ ಕುಳಿತುಕೊಂಡರು. ಪಂಡಿತರೆಲ್ಲರೂ ಸುತ್ತುಮುತ್ತಾಗುವಂತೆ ರಾಜನು ಮಧ್ಯದಲ್ಲಿರುವ ಪೀಠವನ್ನಲಂಕರಿಸಿದ್ದನು. ಆಗ ಕೃಷ್ಣದೇವರಾಜನು ಪಂಡಿತೋತ್ತಮರಿಂದ ಪರಿವೃತನಾಗಿ, ಅಮರಾವತಿಯಲ್ಲಿರುವ ದೇವೇಂದ್ರನಂತೆ ಒಪ್ಪುತ್ತಿದ್ದನು. ದೇವಗುರುವಿಗೆ ಸಮಾನರಾದ ವಿದ್ವಾಂಸರು ಪ್ರಸನ್ನಮುಖದಿಂದ ತಾತಾಚಾರ್ಯರ ದಾರಿಯನ್ನು ನಿರೀಕ್ಷಿಸುತ್ತಿದ್ದರು. ಅಷ್ಟರಲ್ಲಿ ಶಿಷ್ಯಪರಿವಾರಸಮೇತರಾದ ತಾತಾಚಾರ್ಯರು ತಮ್ಮ ಬಿರುದಾವಳಿಗಳನ್ನು ಹೊಗಳಿಸಿಕೊಳ್ಳುತ್ತ ಸಭೆಯನ್ನು ಪ್ರವೇಶಿಸಿದರು.

ಸಭೆಯು ನಿಶ್ಶಬ್ದವಾಯಿತು. ಕೃಷ್ಣದೇವರಾಜನು ಉಚಿತಸನ್ಮಾನಗಳಿಂದ ಆಚಾರ್ಯರನ್ನು ಗೌರವಿಸಿ ಅವರಿಗಾಗಿಯೇ ಸಿದ್ಧಪಡಿಸಿದ ಆಸನದಲ್ಲಿ ಅವರನ್ನು ಕುಳ್ಳಿರಿಸಿದನು. ಆಚಾರ್ಯರು ರಾಜಸನ್ಮಾನದಿಂದ ತುಷ್ಟರಾಗಿ ತಮ್ಮ ತೀಕ್ಷ್ಣದೃಷ್ಟಿಯಿಂದ ಸಭೆಯನ್ನೆಲ್ಲ ನೋಡಿದರು. ವಿದ್ಯಾತೇಜಸ್ಸಿನಿಂದ ಒಪ್ಪುವ ವಿದ್ವನ್ಮಣಿಗಳಿಂದ ಅಲಂಕೃತವಾದ ಆ ಪ್ರಚಂಡ ಸಭೆಯನ್ನು ನೋಡಿ ಮನಸ್ಸಿನಲ್ಲಿ ಸ್ವಲ್ಪ ಬೆದರಿದರು. ಆದರೆ ಬಹಿರಂಗದಲ್ಲಿ ಸ್ವಲ್ಪವೂ ಭೀತಿಯನ್ನು ತೋರ್ಪಡಿಸದೆ ಗಾಂಭೀರ್ಯದಿಂದ ಕುಳಿತುಕೊಂಡರು. ಹೀಗೆ ಆಚಾರ್ಯರಿಗೆ ಸಭೆಯಲ್ಲಿ ಕುಳಿತುಕೊಂಡ ಶೈವ ಪಂಡಿತರನ್ನು ಕಂಡು ಅಂಜಿಕೆಯುಂಟಾದಂತೆ ಆಚಾರ್ಯರನ್ನು ನೋಡಿ ಶೈವ ಪಂಡಿತರಿಗೂ ಅಂಜಿಕೆಯುಂಟಾಯಿತು. ಆಚಾರ್ಯರವರ ಉಗ್ರಮುಖಲಕ್ಷಣ-ಘನಪಾಂಡಿತ್ಯದ ಬಿಂಕುಗಳನ್ನು ನೋಡಿ ಶೈವ ಪಂಡಿತರ ಹೃದಯವು ನಡುಗಿತು. ಆದರೂ ಅವರು ಸಾವರಿಸಿಕೊಂಡು ಮುಂದೇನು ಪ್ರಸಂಗ ನಡೆಯುವದೋ ಎಂದು ನಿರೀಕ್ಷಿಸಲಾರಂಭಿಸಿದರು.

ಕೆಲಹೊತ್ತಿನವರೆಗೆ ರಾಜನಿಗೂ ತಾತಾಚಾರ್ಯರಿಗೂ ಸಂಭಾಷಣವು ನಡೆಯಿತು. ಆ ಸಂಭಾಷಣದಲ್ಲಿ ಕಂಡುಬರುವ ಆಚಾರ್ಯರ ವಿದ್ಯಾದರ್ಪವನ್ನು ತಿಳಿದು ರಾಜನಿಗೂ ಸಭಿಕರಿಗೂ ತುಂಬಾ ಆಶ್ಚರ್ಯವಾಯಿತು. ಬಳಿಕ ರಾಜನು ತಾತಾಚಾರ್ಯರನ್ನು ಕುರಿತು—ನಿಮಗೂ ನಮ್ಮ ಆಸ್ಥಾನದ ಪಂಡಿತರಿಗೂ ವಾದವು ನಡೆಯಲಿ ಎಂದು ಅನುಜ್ಞೆಕೊಟ್ಟನು. ಕೂಡಲೆ

ತಾತಾಚಾರ್ಯರು ಶೈವ ಪಂಡಿತರನ್ನು ವಾದವಿವಾದಕ್ಕೋಸ್ಕರ ಆಹ್ವಾನಮಾಡಿದರು. ರಾಜನು ತನ್ನ ಆಸ್ಥಾನದ ಪಂಡಿತರ ಮುಖವನ್ನು ನೋಡಿದನು. ಶೈವ ಪಂಡಿತರಲ್ಲಿ ಅಗ್ರಗಣ್ಯರಾದವರಲ್ಲಿ ಒಬ್ಬರು ಆಚಾರ್ಯರೊಡನೆ ಪೂರ್ವಪಕ್ಷವನ್ನಾರಂಭಿಸಿದರು. ಇಂಥ ವಿಷಯದಲ್ಲಿಯೇ ವಾದವಿವಾದ ಮಾಡಬೇಕೆಂಬದನ್ನು ನಿರ್ಧರಿಸದ್ದರಿಂದ ಪಂಡಿತರು ಪೂರ್ವಮೀಮಾಂಸೆಯಲ್ಲಿ ಪೂರ್ವಪಕ್ಷ ಮಾಡಿದರು. ತಾತಾಚಾರ್ಯರು ಪೂರ್ವಪಕ್ಷವನ್ನು ಖಂಡಿಸಿದರು. ಆ ದಿನ ಮಧ್ಯಾಹ್ನದ ವರೆಗೆ ತಾತಾಚಾರ್ಯರು ಪೂರ್ವಪಕ್ಷವನ್ನು ಮಾಡದೆ ಪ್ರತಿಸ್ಪರ್ಧಿಗಳ ಪೂರ್ವಪಕ್ಷಗಳನ್ನು ಖಂಡಿಸುವದರಲ್ಲಿಯೇ ವೇಳೆಗಳೆದರು. ಮಧ್ಯಾಹ್ನವಾಗಲು ರಾಜನು ಸಭೆಯನ್ನು ವಿಸರ್ಜಿಸಲು ಸೂಚನೆ ಕೊಟ್ಟನು. ಅಂದಿನ ಸಭಾಕಾರ್ಯವು ಮುಗಿದು ಸರ್ವರೂ ತಮ್ಮ ತಮ್ಮ ಮನೆಗಳಿಗೆ ಹೋದರು. ಆ ದಿನ ಪಂಡಿತರಲ್ಲಿ ತಾತಾಚಾರ್ಯರ ಘನ ವಿದ್ವತ್ತೆಯ ಚರ್ಚೆಯೇ ನಡೆದಿತ್ತು.

ಮರುದಿನ ಮುಂಜಾನೆ ಸರ್ವರೂ ನಿತ್ಯಕರ್ಮಾನುಷ್ಠಾನಗಳನ್ನು ಮುಗಿಸಿಕೊಂಡು, ರಾಜಾಜ್ಞೆಯ ಮೇರೆಗೆ ಸಭೆಗೆ ಬಂದರು. ರಾಜನೂ ಬಂದನು. ಈ ದಿನ ತಾತಾಚಾರ್ಯರು ತಮ್ಮ ಉದ್ದಿಷ್ಟಹೇತು ಸಾಧಿಸಿಕೊಳ್ಳುವದಕ್ಕೋಸ್ಕರ ವಿಶಿಷ್ಟಾದ್ವೈತ ಸಿದ್ಧಾಂತಗಳನ್ನು ಮಂಡಿಸಿ ಅದ್ವೈತಸಿದ್ಧಾಂತ ಖಂಡನಮಾಡಬೇಕೆಂದು ತಾವೇ ಪೂರ್ವಪಕ್ಷವನ್ನಾರಂಭಿಸಿದರು. ಶೈವಪಂಡಿತರು ವಿಶಿಷ್ಟಾದ್ವೈತಸಿದ್ಧಾಂತಗಳನ್ನು ಖಂಡಿಸುತ್ತ ಅದ್ವೈತಸಿದ್ಧಾಂತಗಳನ್ನು ಪ್ರತಿಪಾದಿಸತೊಡಗಿದರು. ಒಮ್ಮೆ ಶೈವಪಂಡಿತರು ಪೂರ್ವ ಪಕ್ಷವನ್ನು ಮಾಡುತ್ತಿದ್ದರು. ಮತ್ತೊಮ್ಮೆ ತಾತಾಚಾರ್ಯರು ಪೂರ್ವ ಪಕ್ಷವನ್ನು ಮಾಡುತ್ತಿದ್ದರು. ಸಭೆಯಲ್ಲಿ ಆಸ್ಥಾನ ಪಂಡಿತರಾಗಿದ್ದ ವಿಶಿಷ್ಟಾದ್ವೈತರೆಲ್ಲ ತಾತಾಚಾರ್ಯರಿಗೆ ಒಮ್ಮನಸ್ಸಿನಿಂದ ಸಹಾಯ ಮಾಡತೊಡಗಿದರು. ಈ ಮತಸಿದ್ಧಾಂತಖಂಡನೆಯ ವಾದವಿವಾದವು ಒಂಭತ್ತು ದಿನಗಳ ವರೆಗೆ ನಡೆಯಿತು. ತಾತಾಚಾರ್ಯರ ಪ್ರತಿಕೋಟಿಗಳಿಗೆ ಉತ್ತರಕೊಡುವದಕ್ಕೆ ಶೈವಪಂಡಿತರು ಅಸಮರ್ಥರಾದರು. ಕೃಷ್ಣದೇವರಾಯನು ತಾತಾಚಾರ್ಯರ ಘನವಾದ ವಿದ್ವತ್ತೆಗೆ ಸುಪ್ರಸನ್ನನಾದನು. ತನ್ನ ಆಸ್ಥಾನದ ಪಂಡಿತರಿಗಿಂತಲೂ ತಾತಾಚಾರ್ಯರ ಯೋಗ್ಯತೆಯು ಅಧಿಕವಾಗಿದೆಯೆಂದು ನಿರ್ಣಯವಾಗಲು ರಾಜನು ಅವರನ್ನು ಪಂಡಿತರ ಸಾಲಿನಲ್ಲಿ ಅಗ್ರಸ್ಥಾನದಲ್ಲಿ ಕುಳ್ಳಿರಿಸಿದನು. ಆಗ ವಿಶಿಷ್ಟಾದ್ವೈತಪಂಡಿತರಿಗಾದ ಆನಂದವನ್ನು ಬಣ್ಣಿಸಲಾಪಲ್ಲ.

# [೪]

ತಾತಾಚಾರ್ಯರು ಹೀಗೆ ಆಸ್ಥಾನಪಂಡಿತರನ್ನು ಪರಾಭವಗೊಳಿಸಿ ರಾಜನ ಆದರಕ್ಕೆ ಪಾತ್ರರಾಗಿ ವಿಜಯನಗರದಲ್ಲಿಯೇ ನೆಲೆಸಿದರು. ಅವರ ಮನಸ್ಸಿನಲ್ಲಿ ರಾಜನಿಗೆ ಗುರುವಾಗಿ ಅವರನ್ನು ವಿಶಿಷ್ಟಾದ್ವೈತ ಮತಕ್ಕೆ ಒಲಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯಿತ್ತು. ಅದಕ್ಕಾಗಿ ಅವರು ಪ್ರತಿನಿತ್ಯದಲ್ಲೂ ರಾಜಸಭೆಗೆ ಹೋಗಿ, ತಮ್ಮ ಪಾಂಡಿತ್ಯದಲ್ಲಿ-ತಮ್ಮ ಮತದಲ್ಲಿ ಆತನಿಗೆ ಪ್ರೇಮವಿಶ್ವಾಸಗಳು ದಯಿಸುವಂತೆ ಪ್ರಯತ್ನಿಸತೊಡಗಿದರು.

ಆಚಾರ್ಯರ ಮನೀಷದಂತೆ ಕಾರ್ಯವು ಸಾಧಿಸಲಾರಂಭಿಸಿತು. ಆಚಾರ್ಯರಿಗೆ ತುಂಬಾ ಸಂತೋಷ; ಕೃಷ್ಣದೇವರಾಯನು ಆಚಾರ್ಯರ ಅಗಾಧ ಪಾಂಡಿತ್ಯಕ್ಕೆ ಮನಸೋತು ಅವರನ್ನು ಬಹಳವಾಗಿ ಪ್ರೀತಿಸತೊಡಗಿದನು. ತಮ್ಮ ಮೇಲೆ ರಾಜನ ಪೂರ್ಣ ಒಲಿಮೆಯಾದದ್ದನ್ನು ಕಂಡು ಆಚಾರ್ಯರು ಹಿಗ್ಗಿ, ರಾಜನಿಗೆ ಶೈವಪಂಡಿತರಲ್ಲಿಯೂ, ಅದ್ವೈತಸಿದ್ಧಾಂತದಲ್ಲಿಯೂ ಅನುರಾಗವು ತಪ್ಪುವಂತೆ ಮೆಲ್ಲಮೆಲ್ಲನೆ ಬೀಜಾರೋಪಣಮಾಡತೊಡಗಿದರು. ಅದೂ ಫಲಿಸಿತು. ರಾಜನು ಅದ್ವೈತಿಗಳನ್ನು ಉದಾಸೀನಮಾಡಿದನು. ವಿಶಿಷ್ಟಾದ್ವೈತಮತವು ಆತನಿಗೆ ಸರ್ವಾಂಗಸುಂದರವಾಗಿ ತೋರತೊಡಗಿತು. ಆಸ್ಥಾನದಲ್ಲಿ ತಾತಾಚಾರ್ಯರನ್ನು ಎದುರಿಸುವ ಪಂಡಿತನು ಒಬ್ಬನೂ ಉಳಿಯದ್ದರಿಂದ ಆಚಾರ್ಯರು ಅಂದ ಮಾತೇ ಸಿದ್ಧಾಂತವಾಗತೊಡಗಿತು. ಒರಬರುತ್ತ ರಾಜನು ಅವರ ಆಧೀನನಾದ್ದರಿಂದ ಆಚಾರ್ಯರು ರಾಜಗುರುತ್ವವನ್ನು ಹೊಂದಿದರು.

ರಾಜಗುರುತ್ವವು ಪ್ರಾಪ್ತವಾಗ ಬಳಿಕ ಕೇಳುವದೇನು? ಆಚಾರ್ಯರ ಮಹತ್ವಾಕಾಂಕ್ಷೆಯೆಂಬ ಬಳ್ಳಿಯು ಹಬ್ಬಿ ಪರಿಶೋಭಿಸತೊಡಗಿತು. ಅದಕ್ಕೆ ಹೂ-ಕಾಯಿಗಳು ಬಿಡಲಾರಂಭಿಸಿದವು. ರಾಜದರ್ಬಾರದಲ್ಲಿ ಸ್ಮಾರ್ತಪಂಡಿತರಿಗೆ ಮನ್ನಣೆಯಿಲ್ಲದಾಯಿತು. ಅವರು ಸಭೆಯನ್ನು ಪ್ರವೇಶಿಸುವದೇ ದುಸ್ತರವಾಯಿತು.

ಸಾಮ್ರಾಜ್ಯಾಧಿಪತಿಯ ಗುರುತ್ವವನ್ನು ಹೊಂದಿದ ಆಚಾರ್ಯರನ್ನು ಎದುರಿಸುವವರೇ ಇಲ್ಲ. ಸಾಮ್ರಾಜ್ಯಕ್ಕೆ ಅಧಿದೈವತವಾದ ವಿರೂಪಾಕ್ಷೇಶ್ವರನಲ್ಲಿ ಕೂಡಾ ಕೃಷ್ಣದೇವರಾಯನಿಗೆ ಔದಾಸೀನ್ಯವುಂಟಾಯಿತು. ತಾತಾಚಾರ್ಯರ ಮಾತೇ ರಾಜನಿಗೆ ವೇದವಾಕ್ಯವಾಯಿತು. ಧಾರ್ಮಿಕ ಕೆಲಸಗಳೆಲ್ಲ ಅವರ ಹೇಳಿಕೆ

ಯಂತೆಯೇ ಸಾಗತೊಡಗಿದವು. ಶೈವರು ಅನಾಥರಾದರು. ಅವರ ಕಷ್ಟವನ್ನು ಕೇಳುವವರಿಲ್ಲದಾಯಿತು. ಶೈವೋತ್ಸವಗಳು ಮುಳುಗಿದವು. ಬರಬರುತ್ತ ಭಸ್ಮಧಾರಿಗಳಿಗೆ ವಿಜಯನಗರದಿಂದ ಚ್ಯುತರಾಗುವ ಸಮಯವು ಪ್ರಾಪ್ತವಾಗುತ್ತದೋ ಹ್ಯಾಗೆಂಬ ಅಂಜಿಕೆಯು ಸರ್ವ ಸ್ಮಾರ್ತಸಾಂಪ್ರದಾಯಿಗಳನ್ನು ಬಾಧಿಸತೊಡಗಿತು. ತತ್ಕಾಲಾಚಾರ್ಯರು ಅವರನ್ನು ವಿಶಿಷ್ಟಾದ್ವೈತಿಗಳಾಗುವಂತೆ ಬೋಧಿಸತೊಡಗಿದರು. ಆದರೆ ಪರಂಪರಾಗತ ಸಾಂಪ್ರದಾಯವನ್ನು ಬಿಡುವದು ಯಾರಿಗೆ ತಾನೆ ಸಾಧ್ಯವಾದೀತು? ಒಂದು ಸಾಂಪ್ರದಾಯವನ್ನು ತ್ಯಜಿಸಿ ಬೇರೊಂದು ಸಾಂಪ್ರದಾಯವನ್ನು ಅನುಷ್ಠಾನದಲ್ಲಿ ತರುವದೆಂದರೆ ಮಹಾಪರಾಧವು. ಬೇರೆ ಬೇರೆ ಮತಸಾಂಪ್ರದಾಯಗಳು ಒಬ್ಬೊಬ್ಬ ಮಹಾಪುರುಷರಿಂದ ಬಳಿಕೆಯಲ್ಲಿ ಬಂದಿರುವದಕ್ಕೆ ದ್ವೈತತಂತ್ರವೇ ಕಾರಣವಾಗಿದೆ. ಮತಸ್ಥಾಪಕರ ಹೃದಯಗಳು ಎಷ್ಟು ಕಲ್ಮಷರಹಿತವಾಗಿದ್ದವೆಂಬದನ್ನು ಮತವೈಷಮ್ಯಭಾವವುಳ್ಳವರು ಕಂಡುಹಿಡಿಯಲಾರರು. ಒಂದು ಮತವು ಅನುಷ್ಠಾನದಲ್ಲಿರುವಾಗ ಬೇರೊಂದು ಮತವು ಮಹಾಪುರುಷರಿಂದ ಪ್ರಸ್ಥಾಪಿತವಾಗಬೇಕಾದರೆ ಅದಕ್ಕೆ ಏನಾದರೊಂದು ಕಾರಣವಿರಬೇಕಷ್ಟೇ; ಕಾರಣದ ಹೊರತು ಕಾರ್ಯವು ಸಂಘಟಿಸಲಾರದು. ಹೊಸಮತವು ಉತ್ಪನ್ನವಾದ ಮಾತ್ರಕ್ಕೆ ಹಳೆಯ ಮತವು ದೂಷ್ಯವೆಂದು ತಿಳಿಯಲಿಕ್ಕಾಗದಷ್ಟೇ; ಯಾಕಂದರೆ ಹಳೆಯ ಹಾಗು ಹೊಸಮತಗಳು ಮಹಾಪುರುಷರಿಂದಲೇ ಅನುಷ್ಠಾನದಲ್ಲಿ ತರಲ್ಪಟ್ಟಿದ್ದರಿಂದ ಒಂದು ಮತವನ್ನು ಬೇರೊಂದು ಮತವು ನಿಂದಿಸುವದಕ್ಕೆ ಕಾರಣವಿರುವದಿಲ್ಲ. ಆದರೆ ಲೋಕವ್ಯವಹಾರವು ಇದಕ್ಕೆ ವಿರುದ್ಧವಾಗಿದೆ. ಒಂದು ಮತದ ಅನುಯಾಯಿಗಳು ಬೇರೊಂದು ಮತದ ಕಡೆಗೆ ದೃಷ್ಟಿಯನ್ನು ಚೆಲ್ಲಬಾರದೆಂದು ಪ್ರತಿಯೊಂದು ಮತದ ಪ್ರವರ್ತಕರು ಸ್ವಮತಶ್ರೇಷ್ಠತೆಯನ್ನು ಪ್ರತಿಪಾದಿಸಿರುವರು. ಸ್ತ್ರೀಗೆ ಪತಿಯು ಪರದೈವತವೆಂದು ಹೇಳಿರುವದರ ಗೂಢವು ಏನಿರಬಹುದು! ಆಕೆಯಲ್ಲಿ ವ್ಯಭಿಚಾರದೋಷ ಅಂಕುರಿಸದೆ ಆಕೆಯು ಸನ್ಮಾರ್ಗಾವಲಂಬಿನಿಯಾಗಿ ಇಹಪರಗಳಲ್ಲಿ ಸೌಖ್ಯಹೊಂದಲೆಂಬದೇ ಅಲ್ಲವೇ?

ಮತಶ್ರೇಷ್ಠತೆಯ ವರ್ಣನೆಯಲ್ಲಿಯೂ ಇದೇ ಅರ್ಥವನ್ನೇ ಅನ್ವಯಿಸಿಕೊಳ್ಳಬೇಕಲ್ಲದೆ ಅನ್ಯಮತಗಳಿಗೆ ದೋಷಾರೋಪಣೆ ಮಾಡಕೂಡದು. ಮನುಷ್ಯಮಾತ್ರರು ತಮ್ಮ ಪೂರ್ವಜರಿಗಾದ ಉಪಕಾರವನ್ನು ಸ್ಮರಿಸಬೇಕು. ಯಾವ ಕಾಲಕ್ಕೆ ಬೌದ್ಧಮತವು ಪ್ರಬಲವಾಗಿ ವೈದಿಕಧರ್ಮವನ್ನು ನಾಶಗೊಳಿಸುವ

ಯತ್ನದಲ್ಲಿತ್ತೋ ಆಗ ದ್ವೈತತಂತ್ರದಂತೆ ಭಗವಾನ್ ಶಂಕರಾಚಾರ್ಯರು ಅವತರಿಸಿ ವೈದಿಕಧರ್ಮವನ್ನು ಉದ್ಧರಿಸಿಕೊಳ್ಳಬೇಕಾಯಿತು. ವೈದಿಕಮತವನ್ನುಳಿಸಿದ ದೊಡ್ಡ ಶ್ರೇಯಸ್ಸು ಶಂಕರಭಗವತ್ಪಾದರನ್ನಾಶ್ರಯಿಸಿರುವದು. ವಸ್ತುಸ್ಥಿತಿಯು ಹೀಗಿದ್ದರೂ ನಾವು ವೈಷ್ಣವರು-ದ್ವೈತವಾದಿಗಳು ಎಂದು ಹೇಳಿಕೊಳ್ಳುವ ಕೆಲಕೆಲವರು ಆ ಪೂಜ್ಯಪಾದರ ಮೇಲೆ ದೋಷಾರೋಪಣೆ ಮಾಡಲೆಳಿಸುವರು. ಅವರ ಐಶ್ವರ ತೇಜಸ್ಸಿಗೆ ಭಂಗತರಬೇಕೆಂದು ಮನಸೋಕ್ತ ಕುಕಲ್ಪನೆಗಳಿಂದ ನಿಂದಿಸ ಹೋಗಿರುವರು. [ಮಣಿಮಂಜರಿ ನೋಡಬಹುದು] ಈ ಕೃತಿಯು ನಿಂದಕರನ್ನೇ ಪರಿಹಾಸಕ್ಕೀಡು ಮಾಡುತ್ತದಲ್ಲದೆ ಆ ಪೂಜ್ಯಪಾದರ ಧವಲಕೀರ್ತಿಗೆ ಏನೂಬಾಧೆ ತರಲಾರದು. ಇದರಂತೆ ತಿಳಿಗೇಡಿಗಳಾದ ಕೆಲಜನ ಅದ್ವೈತಮತಾವಲಂಬಿಗಳು ಮತ್ಸರಗ್ರಸ್ತರಾಗಿ ದ್ವೈತಮತಸ್ಥಾಪನಾಚಾರ್ಯರನ್ನು ನಿಂದಿಸುವರು. ಇಬ್ಬರ ಈ ಕೃತಿಗಳು ಸಾಧುಜನರ ದೃಷ್ಟಿಯಿಂದ ತಿರಸ್ಕರಣೀಯವೆಂದು ಹೇಳಲವಶ್ಯವಿಲ್ಲ. ಇರಲಿ;

ಈ ಮತವೈಷಮ್ಯ ದೋಷವು ತಾತಾಚಾರ್ಯರನ್ನು ದೂರೀಕರಿಸಿರಲಿಲ್ಲ. ಅದ್ವೈತಿಗಳು ಮನುಷ್ಯರು ಅಹುದೋ ಅಲ್ಲವೋ ಎಂಬದೇ ಅವರಿಗೆ ಸಂಶಯಾಸ್ಪದವಾಗಿತ್ತು. ಯಾಕಂದರೆ ಅವರು ಅದ್ವೈತಿಗಳನ್ನು ಮನುಷ್ಯರೆಂದು ಭಾವಿಸಿದ್ದರೆ ಸಮಾನಸ್ಕರೆಂದು ತಿಳಿದು ಅವರನ್ನು ದುಃಖಕ್ಕೀಡು ಮಾಡುತ್ತಿರಲಿಲ್ಲ.

ತಾತಾಚಾರ್ಯರ ಮಧುರ ವಾಕ್ಯಾಲಾಪಗಳಿಗೆ ಮರುಳಾದ ಕೃಷ್ಣದೇವರಾಜನಿಗೆ ಶೈವಸಾಂಪ್ರದಾಯದವರ ಕಷ್ಟವು ತಿಳಿಯದಾಯಿತು. ಆಚಾರ್ಯವರ್ಯರು ತಮ್ಮ ತಂತ್ರಪ್ರಭಾವದಿಂದ ಯಾವ ಸುದ್ದಿಯೂ ರಾಜನ ಕಿವಿವರೆಗೆ ಹೋಗದಂತೆ ಏರ್ಪಡಿಸಿದ್ದರು. ದಯಾಳುಸ್ವಭಾವದ ಆ ರಾಜನು ಸಮಸ್ತ ಪ್ರಜೆಗಳೂ ಆನಂದದಿಂದಲೇ ಇರುವರೆಂದು ಭಾವಿಸಿದ್ದನು. ರಾಜನಿಗೆ ಪ್ರಜೆಗಳ ದುಃಖವು ತಿಳಿದರೆ ಪರಿಹಾರೋಪಾಯಗಳನ್ನುಂಟುಮಾಡುವನು. ತಿಳಿಯದಿದ್ದರೆ ಏನು ಮಾಡುವನು?

ರಾಜನು ವಿಶಿಷ್ಟಾದ್ವೈತಸಿದ್ಧಾಂತಗಳನ್ನು ಒಪ್ಪಿಕೊಂಡು ಅನುಷ್ಠಾನದಲ್ಲಿ ತಂದದ್ದರಿಂದ ತಾತಾಚಾರ್ಯರವರು ಅರ್ಧ ಕೆಲಸವಾಯಿತೆಂದು ಹರ್ಷನಿರ್ಭರರಾದರು. ಉಳಿದ ಅರ್ಧ ಕೆಲಸವನ್ನು ನೆರವೇರಿಸಿ ಕೃತಕೃತ್ಯರಾಗಬೇಕೆಂದು ಮನಸ್ಸಿನಲ್ಲಿ ಮುಂದಿನ ಕಾರ್ಯಸಾಧಕವಾದ ವ್ಯೂಹವನ್ನು ರಚಿಸತೊಡಗಿದರು.

ಈ ಸಂಭ್ರಮದಿಂದ ವಿಶಿಷ್ಟಾದ್ವೈತ ಮತಪ್ರಸಾರಣೆಗಾಗಿ ಇಷ್ಟೊಂದು ದೀರ್ಘ ಪ್ರಯತ್ನಪಡುವ ನಾನು, ಚೈತನ್ಯದೇವರ ಅಂಶಸಂಭೂತನಾಗಿರಬಹುದೇನೆಂಬ ಭ್ರಾಂತಿಯು ಕೂಡ ಅವರಲ್ಲುತ್ಪನ್ನವಾಗದೆ ಇರಲಿಲ್ಲ.

---

## [ ೫ ]

ವಿಜಯನಗರದ ಶೈವಪಂಡಿತರೆಲ್ಲರೂ ಒಟ್ಟುಗೂಡಿದರು. ಒಬ್ಬನ ದುಃಖವು ಮತ್ತೊಬ್ಬನಿಗಿಂತಲೂ ಅಧಿಕವಾಗಿತ್ತು. ಒಬ್ಬನ ವರ್ಷಾಶನವು ನಿಂತು ಹೋಗಿದ್ದರೆ ಇನ್ನೊಬ್ಬನ ಹೊಲ-ಮನೆಗಳು ಬೊಕ್ಕಸದ ಹಾದಿಯನ್ನು ಹಿಡಿದಿದ್ದವು. ಒಬ್ಬನ ಅರಮನೆಯ ಧರ್ಮಾಧಿಕಾರವು ನಷ್ಟವಾಗಿದ್ದರೆ ಇನ್ನೊಬ್ಬನ ರಾಜಪೌರೋಹಿತ್ಯವು ಅಳಿದುಹೋಗಿತ್ತು. ಎಲ್ಲರಿಗೂ ಮನೆಯಲ್ಲಿದ್ದ ವಸ್ತ್ರ-ಒಡವೆಗಳನ್ನು ಮುರಿಸಿ ಉಪಜೀವಿಕೆಯನ್ನು ಸಾಗಿಸುವ ಹೊತ್ತು ಬಂದಿತ್ತು. ಅದೂ ಆಗಬಹುದೆಂದು ತಾಳ್ಮೆಯನ್ನು ತಾಳಿದರೆ ಶೈವರು ಬೀದಿಯಲ್ಲಿ ಆಡ್ಯಾಡಬಾರದೆಂಬ ಕಟ್ಟಳೆಯು ಎಲ್ಲಿ ಹೊರಬೀಳುವದೋ ಎಂಬ ಅಂಜಿಕೆ. ಪಂಡಿತರೆಲ್ಲರೂ ತ್ರಸ್ತರಾಗಿದ್ದರು. ತಮ್ಮ ಈ ಗೋಳಾಟವನ್ನು ರಾಜನೆದುರಿಗೆ ದೂರಿಕೊಳ್ಳಲು ಆಸ್ಪದವಿಲ್ಲ. ಸ್ಮಾರ್ತನೆನಿಸಿಕೊಳ್ಳುವ ಒಬ್ಬನು ಕೂಡಾ ಅರಮನೆಯಲ್ಲಿ ಕಾಲಿಕ್ಕುವಂತಿರಲಿಲ್ಲ ಅಷ್ಟು ನಿರ್ಬಂಧ; ಕೂಡಿದ ಪಂಡಿತರಲ್ಲಿ ಒಬ್ಬನು "ಮುಂದೆ ನಮ್ಮ ಗತಿಯೇನು?" ಎಂದು ನುಡಿದನು. ಅದನ್ನು ಕೇಳಿ ಮತ್ತೊಬ್ಬನು ವಿನೋದದಿಂದ—ಬೇರೆ ಗತಿಯಿನ್ನೇನು? ತಾತಾಚಾರ್ಯರ ನಾಮವೇ ಗತಿ! ಎಂದನು. ಅಂಥ ವಿಪನ್ನಾವಸ್ಥೆಯಲ್ಲಿಯೂ ಎಲ್ಲರಿಗೂ ನಗೆ ಬಂದಿತು. ಬಳಿಕ ಒಬ್ಬ ವೃದ್ಧಪಂಡಿತನು ನುಡಿದನೇನಂದರೆ—"ಇದು ವಿನೋದದ ಸಮಯವಲ್ಲ. ನಾವು ಸುಮ್ಮನೆ ಕುಳಿತರೆ ನಮ್ಮ ಜೀವಿತವೇ ಕಷ್ಟಸಾಧ್ಯವಾಗುತ್ತದೆ. ರಾಜನಿಗೆ ಅದ್ವೈತಸಿದ್ಧಾಂತದ ಮೇಲ್ಮೆಯನ್ನು ತೋರಿಸಿದ ಹೊರತು ನಾವು ಗತಿ ಕಾಣಲಾರೆವು. ಆದರೆ ತಾತಾಚಾರ್ಯರ ಮುಂದೆ ನಮ್ಮ ಮತಿಯು ಕುಂಠಿತವಾಗುವದರಿಂದ ನಮ್ಮಲ್ಲಿ ಯಾರಿಂದಲೂ ಈ ಕೆಲಸವಾಗುವಂತಿಲ್ಲ. ತಾತಾಚಾರ್ಯರು ಮಾತಿನಲ್ಲಿ ಮುಂದಿರುವರು. ಅವರ ಕೋಟಿಕ್ರಮಕ್ಕೆ ನಾವು ಈಡಾಗುವದಿಲ್ಲೆಂಬದು ಅನುಭವಸಿದ್ಧವಾಗಿರುವದು. ಆದರೆ ತಾತಾಚಾರ್ಯರಿಗೆ ನಾಮ ಹಚ್ಚುವ ಒಬ್ಬ ಪಂಡಿತರು ಮಾತ್ರ ನಮ್ಮಲ್ಲಿರುವರು. ಆ ಪಂಡಿತರು ಸುದೈವ

ದಿಂದ ನಮ್ಮ ಪ್ರಾರ್ಥನೆಗೆ ಕಿವಿಗೊಟ್ಟು ಇಲ್ಲಿಯವರೆಗೆ ಬಂದರೆ ಹಾವಿಗೆ ಗರುಡನ ಗೆರೆ ತೋರಿಸಿದಂತಾಗುವದು.''

ವೃದ್ಧ ಪಂಡಿತನ ಈ ಮಾತುಗಳನ್ನು ಕೇಳಿ ಮತ್ತೊಬ್ಬನು—ಹೀಗಿದ್ದರೆ ಅವರ ಹೆಸರು ಹೇಳಿರಿ; ಅವರ ಕೈ-ಕಾಲು ಕಟ್ಟಿಕೊಂಡು ಕರೆದುಕೊಂಡು ಬರುವೆವು, ಎಂದನು.

''ಆ ಪಂಡಿತರು ಸಾಮಾನ್ಯರಲ್ಲ ದೈವೀತೇಜಸ್ಸುಳ್ಳವರು. ಅವರನ್ನು ಈಶ್ವರಾಂಶರೆಂದು ಕರೆಯುವರು. ಅದ್ವೈತಸಿದ್ಧಾಂತದ ಮಂಡನಕ್ಕಾಗಿಯೇ ಅವರ ಅವತಾರವಿರುವದೆಂದು ಕೇಳುತ್ತೇನೆ.''

''ಹಾ ತಿಳಿಯಿತು, ನೀವು ಹೇಳುವದು ಅಪ್ಪಯ್ಯದೀಕ್ಷಿತರ ವಿಷಯವಾಗಿ ಅಲ್ಲವೇ? ಆ ಮಹಾನುಭಾವರು ನಮ್ಮ ದುಃಖವನ್ನು ಕೇಳಿ ಎಷ್ಟು ಮಾತ್ರಕ್ಕೂ ನಿಲ್ಲಲಾರರು.''

''ಇಷ್ಟು ದಿನ ದುಃಖಪಟ್ಟಂತೆ ಇನ್ನು ಮುಂದೆ ನಾವು ದುಃಖಪಡುವಕಾರಣವಿಲ್ಲ. ವೃದ್ಧಪಿತಾಮಹರಾದ ನಮ್ಮ ಶಂಕರಶಾಸ್ತ್ರಿಗಳವರು ದೀಕ್ಷಿತರವರ ಸ್ಮರಣವನ್ನು ನಮಗೆ ತಂದು ಕೊಟ್ಟು ಮಹದುಪಕಾರವನ್ನು ಮಾಡಿದರು. ಆ ಮಹಾನುಭಾವರ ಕಡೆಗೆ ನಾಳೆಗೇ ಹೊರಡೋಣ.''

ಈ ಮೇರೆಗೆ ಪಂಡಿತರು ತಮ್ಮ ತಮ್ಮೊಳಗೆ ಆಲೋಚಿಸಿ, ಅಪ್ಪಯ್ಯದೀಕ್ಷಿತರವರ ಬಳಿಗೆ ಯಾರು ಯಾರು ಹೋಗಬೇಕೆಂಬದನ್ನು ನಿರ್ಧರಿಸಿದರು. ಹಾಗು ಈ ಸಂಗತಿಯನ್ನು ಗೌಪ್ಯವಾಗಿರಿಸಲು ಬಹುದಕ್ಷತೆಯನ್ನು ಪ್ರತಿಯೊಬ್ಬರೂ ವಹಿಸಬೇಕೆಂದು ಎಲ್ಲ ಸಭಿಕರಿಗೂ ಸೂಚಿಸಿದರು. ತಾತಾಚಾರ್ಯರ ತಂತ್ರಗಳನ್ನು ಬಲ್ಲವರಾದ ಆ ಪಂಡಿತರು ತಮ್ಮ ಪ್ರಯಾಣವಾರ್ತೆಯು ಆಚಾರ್ಯರಿಗೆ ತಿಳಿದರೆ ದಾರಿಯಲ್ಲಿಯೇ ತಮಗೆನೂರುವರುಷಗಳುತುಂಬಬಹುದೆಂಬ ಅಂಜಿಕೆಯು ಪೂರ್ಣವಾಗಿದ್ದಿತು, ನೆರೆದರವಲ್ಲಿ ಎಲ್ಲರೂ ಸಮದುಃಖಿಗಳಾದ್ದರಿಂದ ಎಲ್ಲರೂ ಈ ಸಂಗತಿಯನ್ನು ಗೌಪ್ಯವಾಗಿರಿಸುವದು ಅವಶ್ಯವಾಗಿತ್ತು. ಎಲ್ಲರಿಗೂ ತಮ್ಮ ದುಃಖವು ತಿಳಿಯಹತ್ತಿದಾಗಲೇ ಸಂಘಶಕ್ತಿಯುಂಟಾಗುತ್ತದೆಂಬದು ಸುಳ್ಳಲ್ಲ. ಸಭೆಯ ಸಂಗತಿಯು ಆಚಾರ್ಯರ ಕಿವಿಯವರೆಗಾಗಲಿ, ಅವರ ಅನುಚರರ ವರೆಗಾಗಲಿ, ಸ್ವಲ್ಪವೂ ಹೋಗಲಿಲ್ಲ. ಗುಪ್ತಸಭೆಯ ಸಂಗತಿಯು ಗುಪ್ತವಾಗಿಯೇ ಉಳಿಯಿತು. ಅಪ್ಪಯ್ಯದೀಕ್ಷಿತರನ್ನು ಕಾಣಲು ಹೊರಟ ವಿಜಯನಗರದ ಪಂಡಿತರು ನಿರ್ವಿಘ್ನದಿಂದ ದೀಕ್ಷಿತರ ಸನ್ನಿಧಿಯನ್ನು ಸೇರಿದರು.

ಚೈತ್ರಮಾಸ, ಸಾಯಂಕಾಲದಸಮಯ; ಸೂರ್ಯನು ಅಸ್ತಂಗತನಾಗಲು ಇನ್ನು ತಾಸಿನ ಅವಕಾಶವಿರಬಹುದು. ಸ್ವಚ್ಛವಾಗಿ ಗೋಮಯದಿಂದ ಸಾರಿಸಿದ ಒಳಂಗಣದಲ್ಲಿ ವಿಶಾಲವಾದ ಕೃಷ್ಣಾಜಿನ ಆಸನದ ಮೇಲೆ ದೀಕ್ಷಿತರವರು ಕುಳಿತುಕೊಂಡಿದ್ದರು. ಅವರ ಬಳಿಯಲ್ಲಿ ನಾಲ್ಕಾರು ಜನ ಪ್ರೌಢ ಶಿಷ್ಯರು ಶಾಸ್ತ್ರಚರ್ಚೆಯನ್ನು ಮಾಡುತ್ತ ಕುಳಿತಿದ್ದರು. ಆ ಪ್ರಶಸ್ಥವಾದ ಅಂಗಳದಲ್ಲಿ ಜಾಜಿ, ಮಲ್ಲಿಗೆ ಮೊದಲಾದ ಲತೆಗಳು ಸುಂದರವಾದ ಮಂಟಪಗಳನ್ನಲಂಕರಿಸಿ ಪರಿಶೋಭಿಸುತ್ತಿದ್ದವು. ಗುಲಾಬಿ, ಶೇವಂತಿಗೆ ಮೊದಲಾದ ಗಿಡಗಳ ಪುಷ್ಪವಾಟಿಕೆಗಳು ಅಲ್ಲಲ್ಲಿಗೆ ಒಪ್ಪುತ್ತಿದ್ದವು. ಅವುಗಳಲ್ಲಿ ಅದೇ ಅರಳಿದ ಪುಷ್ಪಗಳ ಸುಗಂಧವು ಅಂಗಳದಲ್ಲೆಲ್ಲ ಪಸರಿಸಿತ್ತು. ವಿಪುಲಜಲಸಿಂಚನದಿಂದ ಆ ಲತಾವೃಕ್ಷಗಳೆಲ್ಲ ಹಚ್ಚಗೆ ಒಪ್ಪುತ್ತಿದ್ದವು. ಯಾರಾದರೂ ಪಂಡಿತರು ಬಂದರೆ ಕೂಡ್ರಲಿಕ್ಕೆಂದು ಬೇರೆ ನಾಲ್ಕೆಂಟು ಆಸನಗಳನ್ನು ಅಲ್ಲಿಯಿಡಿಸಿದ್ದರು. ಆ ಪುಷ್ಪವಾಟಿಕೆಯನ್ನೂ ಪ್ರಶಸ್ತ ಅಂಗಳದ ಶೋಭೆಯನ್ನೂ ಅಲ್ಲಿ ಪ್ರಾಪ್ತವಾಗಿರುವ ಪ್ರಶಾಂತವಾದ ಐಶ್ವರತೇಜಸ್ಸನ್ನು ನೋಡಿ ವಿಜಯನಗರದ ಪಂಡಿತರು ಆನಂದಭರಿತರಾಗಿ ಮೆಲ್ಲಗೆ ಅಂಗಳದಲ್ಲಿ ಪ್ರವೇಶಿಸಿ ನಾವು ಧನ್ಯರಾದೆವು. ನಮ್ಮ ಜನ್ಮವು ಸಾರ್ಥಕವಾಯಿತು, ಎಂದು ನುಡಿಯುತ್ತ ದೀಕ್ಷಿತರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದರು. ಆಗ ದೀಕ್ಷಿತರು ಮಂದಹಾಸಯುಕ್ತರಾಗಿ ಶುದ್ಧ ಸಂಸ್ಕೃತ ವಾಣಿಯಿಂದ "ಯಾವಊರವರು ಯಾಕೆಬಂದಿರಿ" ಎಂದು ಅವರ ಯೋಗಕ್ಷೇಮವನ್ನು ವಿಚಾರಿಸಿ ಆಸನದಲ್ಲಿ ವಿಶ್ರಮಿಸಲು ಸೂಚಿಸಿದರು.

ಬಳಿಕ ಆ ಪಂಡಿತರು ಉಚಿತಾಸನದಲ್ಲಿ ಕುಳಿತುಕೊಂಡು ತಾವುಬಂದ ಕಾರ್ಯಭಾಗವನ್ನು ನಿವೇದಿಸಿದರು. ಪಂಡಿತರು ಹೇಳಿದ ಸಂಗತಿಗಳನ್ನು ಕೇಳಿ ದೀಕ್ಷಿತರಿಗೆ ತುಂಬಾ ಅಸಮಾಧಾನವಾಯಿತು. ಆಗ ಅವರು—"ಎಲಾ! ತಾತಾಚಾರ್ಯರು ವಿಜಯನಗರಕ್ಕೆ ಬಂದಿರುವರೆ? ಪರಂಪರಾಗತ ಸಾಂಪ್ರದಾಯವನ್ನು ತ್ಯಜಿಸಿ ರಾಜನು ತಾತಾಚಾರ್ಯರ ಶಿಷ್ಯನಾಗಿರುವನೆ? ಆಚಾರ್ಯರು ನಮ್ಮ ತಂದೆಯವರ ಬಳಿಯಲ್ಲಿ ಓದಿದ್ದಕ್ಕೆ ಸಾರ್ಥಕವಾಯಿತು. ಅದ್ವೈತಿಗಳ ಮೇಲೆ ಇಷ್ಟೊಂದು ಕೃಪಾಕಟಾಕ್ಷವೆ? ಇರಲಿ, ಪಂಡಿತರೇ ಭಯಪಡಬೇಡಿರಿ ಅದ್ವೈತಧರ್ಮಸಾಮ್ರಾಜ್ಯವನ್ನು ರಕ್ಷಿಸುವದು ನಮ್ಮ ಕರ್ತವ್ಯವಾಗಿದೆ. ನಮ್ಮ ಮನಸ್ಸಿನಲ್ಲಿ ದ್ವೈತಿಗಳನ್ನಾಗಲಿ, ವಿಶಿಷ್ಟಾದ್ವೈತಿಗಳನ್ನಾಗಲಿ, ಜರೆಯಬೇಕೆಂದಿರುವದಿಲ್ಲ. ಮನುಷ್ಯನ ಬುದ್ಧಿಭೇದದಿಂದ ಒಬ್ಬೊಬ್ಬನಿಗೆ ಒಂದೊಂದು

ಸಾಂಪ್ರದಾಯವು ಪ್ರಿಯವಾಗಿ ತೋರಬಹುದು. ಮಹಾಪುರುಷರಿಂದ ಅನುಷ್ಠಾನದಲ್ಲಿ ತರಲ್ಪಟ್ಟ ಸಾಂಪ್ರದಾಯಗಳನ್ನು ಆ ಸಾಂಪ್ರದಾಯಸ್ಥರು ಪ್ರಶಸ್ಥವಾಗಿ ಆಚರಿಸಬಹುದು. ಆದರೆ ಅನ್ಯ ಸಾಂಪ್ರದಾಯಸ್ಥರಿಗೆ ಪೀಡೆ ಕೊಡಬಾರದು. ಬೇಕಾದರೆ ತಮ್ಮ ಬುದ್ಧಿ ಸಾಮರ್ಥ್ಯವಿದ್ದಮೇರೆಗೆ ಅನ್ಯಮತಸಿದ್ಧಾಂತಗಳನ್ನು ಖಂಡಿಸಬಹುದು. ಬುದ್ಧಿಯ ಓಟವು ಶಬ್ದಾರ್ಥ-ವಾಕ್ಯಾರ್ಥಗಳಲ್ಲಿರಬೇಕಲ್ಲದೆ ವ್ಯಕ್ತಿದ್ವೇಷದಲ್ಲಿರಬಾರದು. ಇದನ್ನು ತಾತಾಚಾರ್ಯರು ಮರೆತಂತೆ ತೋರುತ್ತದೆ,'' ಎಂದು ನುಡಿದರು.

ದೀಕ್ಷಿತರವರ ಈ ವಿಚಾರ ಮುಕ್ತಾಫಲಗಳನ್ನು ಕೇಳಿ ವಿಜಯನಗರದ ಪಂಡಿತರಿಗೆ ತುಂಬಾ ಸಮಾಧಾನವಾಯಿತು. ಇಂಥ ಮಹಾನುಭಾವರ ದರ್ಶನವಾದ ದಿನವೇ ಸುದಿನವೆಂದು ಭಾವಿಸಿ ಅಂದಿನ ರಾತ್ರಿಯನ್ನು ಆ ಮಹಾತ್ಮರ ಸನ್ನಿಧಿಯಲ್ಲಿ ಸಮಾಧಾನದಿಂದ ಕಳೆದರು.

(೬)

ಇತ್ತ ವಿಜಯನಗರದಲ್ಲಿ ತಾತಾಚಾರ್ಯರು ತಮ್ಮ ಮಂದಿರದಲ್ಲಿ ತಮ್ಮ ಕರ್ತೃತ್ವಶಕ್ತಿಯನ್ನು ನೆನೆನೆನೆದು ಸಂತೋಷಪಡುತ್ತ ಕುಳಿತುಕೊಂಡಿದ್ದರು. ಮುಖಸ್ತುತಿಗ್ರೀವ ಪರಿವಾರವು ಅವರ ಸುತ್ತಲೂ ಕುಳಿತುಕೊಂಡಿತ್ತು. ಅಷ್ಟರಲ್ಲಿ ಒಬ್ಬ ಚರನು ಓಡಿ ಬಂದು ಆಚಾರ್ಯರವರಿಗೆ ನೆಲಮುಟ್ಟಿ ನಮಸ್ಕರಿಸಿ, ಧರ್ಮಪ್ರಭೋ, ಇಲ್ಲಿಗೆ ಸಮೀಪದಲ್ಲಿರುವ ಕಣಿವೇಮಾರುತೀ ಸ್ಥಾನದಲ್ಲಿ ದಕ್ಷಿಣದೇಶದ ದೊಡ್ಡ ಪಂಡಿತರೊಬ್ಬರು ಬಂದಿಳಿದಿರುವರಂತೆ; ಅವರ ಶಿಷ್ಯಪರಿವಾರವು ಲೆಕ್ಕಹತ್ತದಷ್ಟಿರುವದಂತೆ! ಆ ಪಂಡಿತರಿಗೆ ಮಹಾರಾಜರಂತೆ ಛತ್ರ-ಚಾಮರಾದಿ ಸಮಸ್ತ ಬಿರುದಾವಳಿಗಳು ಇವೆಯಂತೆ! ಯಾರಾದರೂ ಹೊಸ ಪಂಡಿತರು ಬಂದರೆ ಸುದ್ದಿಯನ್ನು ತಿಳಿಸಬೇಕೆಂದು ಸನ್ನಿಧಿಯಿಂದ ಅಪ್ಪಣೆಯಾದ ಮೇರೆಗೆ ಬಿನ್ನವಿಸಿಕೊಂಡಿರುವೆನು. ದಕ್ಷಿಣಹೆಬ್ಬಾಗಿಲ ಕಾವಲುಗಾರನು ತಂದಸುದ್ದಿಯಿದು; ನಿಜವಾದ ಸುದ್ದಿಯಿರುವದಂತೆ!

ಈ ಮೇರೆಗೆ ಚರನು ವರದಿಯನ್ನು ಕೊಟ್ಟು ಮತ್ತೆ ನೆಲಮುಟ್ಟಿ ಪ್ರಣಾಮ ಮಾಡಿ ಹೊರಟು ಹೋಗಲು ತಾತಾಚಾರ್ಯರು ನೆಟ್ಟಗೆಕುಳಿತು ಸ್ತುತಿಪಾಠಕರ ಮುಂದೆ ಯಾವ ಪಂಡಿತನವನು? ನನ್ನ ಬಳಿಗೆ ಬರಬೇಕಾದರೆ

ಛತ್ರ- ಚಾಮರಾದಿ ಬಿರುದಾವಳಿಗಳಿಂದ ಬರುವ ಎದೆಗಾರಿಕೆಯು ಯಾವನಲ್ಲಿರುವದು? ಯಾವನಾದರೂ ಸಂಭಾವನೆಯು ಆತೆಗಾಗಿ ಬರಬೇಕಾದರೆ ನೆಮ್ಮದಿಯಾಗಿ ಬರುತ್ತಿದ್ದನು. ಎಲಾ, ಚರನನ್ನು ಕೇಳುವದಕ್ಕೆ ಮರೆತು ಬಿಟ್ಟೆನು. ಯಾರವರು ಅಲ್ಲಿ ಆ ಚರನನ್ನು ಕೂಗಿರೋ ಎಂದರು. ಬಳಿಯಲ್ಲಿದ್ದ ಒಬ್ಬ ಸ್ತುತಿಪಾಠಕನು. ಓಡಿಹೋಗಿ ದ್ವಾರರಕ್ಷಕರಲ್ಲಿ ಒಬ್ಬನನ್ನು ಕುರಿತು ಆ ಚರನನ್ನು ಹಿಡಿದು ತರುವಂತೆ ಆಜ್ಞಾಪಿಸಿದನು. ಅವನು ಆಜ್ಞೆಯುಮೇರೆಗೆ ಚರನನ್ನು ಕರೆದುಕೊಂಡು ಬಂದನು. ಚರನು ಬಂದದ್ದನ್ನು ನೋಡಿ ತಾತಾಚಾರ್ಯರು— ಎಲಾ? ಆ ಪಂಡಿತನು ಸ್ಮಾರ್ತನೋ-ವೈಷ್ಣವನೋ ಎಂಬದನ್ನು ಹೇಳಲಿಲ್ಲವಲ್ಲ ಎಂದರು. ಅದಕ್ಕೆ ಆ ಚಾರನು ತಲೆತುರಿಸುತ್ತ ಬುದ್ಧೀ ಇದನ್ನು ನಾನು ಕೇಳಲಿಲ್ಲ. ಅಪ್ಪಣೆಯಾದರೆ ಸಮಸ್ತವನ್ನೂ ತಿಳಿದುಕೊಂಡು ಬರುವೆನು ಎಂದು ಬಿನ್ನವಿಸಿಕೊಂಡನು. ಆಗ ತಾತಾಚಾರ್ಯರು ಗದ್ದರಿಸಿ— ಈಗಲೇ ನೀನು ಶೀಘ್ರವಾಗಿ ಹೋಗಿ ಪಂಡಿತನು ಯಾರೆಂಬ ವಿಷಯವಾಗಿ ತಿಳಿಯಬೇಕಾದ ಸಂಗತಿಗಳನ್ನೆಲ್ಲ ತಿಳಿದು ನಮಗೆ ನಿವೇದಿಸು. ಇಂಥ ಅಪೂರ್ಣ ವರದಿಯನ್ನು ಇನ್ನು ಮುಂದೆ ಕೊಡಕೂಡದು ಎಂದು ಅಪ್ಪಣೆ ಮಾಡಿದನು. ಚರನು ಹಾಗೇ ಆಗಲಿ ಬುದ್ಧೀ, ಎಂದು ನುಡಿದು ಪ್ರಣಾಮಮಾಡಿ ಹೊರಟು ಹೋದನು.

ಚರನು ಹೊರಟು ಹೋದ ಬಳಿಕ ತಾತಾಚಾರ್ಯರು ಸ್ತುತಿಪಾಠಕರನ್ನು ಮನೆಗೆ ಕಳುಹಿ ಒಬ್ಬರೇ ಕುಳಿತು ಪಂಡಿತರು ಯಾರಾಗಿರಬಹುದೆಂದು ಯೋಚಿಸ ತೊಡಗಿದರು. ಬಹುಶಃ ದಕ್ಷಿಣದೇಶದ ಪಂಡಿತನೆಂದರೆ ಅಪ್ಪಯ್ಯ ದೀಕ್ಷಿತನೇ ಇರಬಹುದೆಂಬ ಸಂಶಯವು ಅವನಿಗೆ ಬಂದಿತು. ಯಾಕೆಂದರೆ ತನ್ನನ್ನು ಮೀರಿದ ಪಂಡಿತರೆಂದರೆ ದೀಕ್ಷಿತರೊಬ್ಬರೇ ಎಂಬದು ಅವರಿಗೆ ನಂಬಗೆಯಿತ್ತು. ದೀಕ್ಷಿತರ ಸ್ಮರಣಮಾತ್ರದಿಂದಲೇ ತಾತಾಚಾರ್ಯರ ಅರ್ಧಮರ್ಧ ಧೈರ್ಯವು ಅಳಿದು ಹೋಯಿತು. ದೀಕ್ಷಿತರವರೇ ಬಂದದ್ದು ನಿಜವಾದರೆ ಮುಂದೇನು ಮಾಡಬೇಕೆಂಬ ಯೋಚನೆಯು ಹುಟ್ಟಿತು. ಆಚಾರ್ಯರು ಮಹಾತಂತ್ರಗಾರರು. ಅವರಲ್ಲಿ ವಿದ್ಯೆಗೆ ತಕ್ಕಹಾಗೆ ಯುಕ್ತಿಗಳು ಬಹಳಿದ್ದವು. ಯಾವದೊಂದು ಯುಕ್ತಿಯ ಯೋಜನೆಯಿಂದ ಓಡಿಸಿ ಬಿಡಲಿಕ್ಕೆ ಬಂದೀತೆಂದು ಭಾವಿಸಿ ಸ್ವಲ್ಪ ಸಮಾಧಾನವ ತಾಳಿದರು.

ಕೆಲಹೊತ್ತಿನ ಮೇಲೆ ಆ ಚರನು ನಿಜವಾದ ಸುದ್ದಿಯನ್ನು ತಂದನು. ಕಣವಿಮಾರುತೀ ಕ್ಷೇತ್ರದಲ್ಲಿದ್ದ ಪಂಡಿತರು ಅಪ್ಪಯ್ಯದೀಕ್ಷಿತರೆಂಬವರು ಎಂದು ತಾತಾಚಾರ್ಯರಿಗೆ ಶ್ರುತಪಡಿಸಿದನು. ಅಪ್ಪಯ್ಯದೀಕ್ಷಿತರ ಹೆಸರನ್ನು ಕೇಳಿ ಆಚಾರ್ಯರ ಮೋರೆಯು ಸ್ವಲ್ಪಬಾಡಿತು. ಈ ಶನೈಶ್ಚರನು ಯಾಕೆ ಒಂದನೋ ಎಂದು ಒಟಗುಟ್ಟಿ ಚರನಿಗೆ ಹೋಗಲಪ್ಪಣೆಕೊಟ್ಟು, ವಿಚಾರಮಗ್ನನಾದನು. ಬಳಿಕ ಅವನು ಯಾವದೋ ಒಂದು ಯುಕ್ತಿಯನ್ನು ಕಂಡು ಹಿಡಿದು ಅರಮನೆಯ ದ್ವಾರಪಾಲಕರಿಗೆ ಅಪ್ಪಯ್ಯದೀಕ್ಷಿತರ ಕಡೆಯುವರಾದ ಒಬ್ಬರನ್ನೂ ಒಳಗೆ ಬಿಡಕೂಡದು. ಮತ್ತು ಅಪ್ಪಯ್ಯದೀಕ್ಷಿತರೆಂಬವರು ವಿಜಯ ನಗರದ ಸಮೀಪಕ್ಕೆ ಬಂದಿರುವರೆಂಬ ವಾರ್ತೆಯನ್ನು ಯಾರೂ ಕೃಷ್ಣದೇವರಾಯರಿಗೆ ತಿಳಿಸದಂತೆ ಯೋಗ್ಯ ಬಂದೋಬಸ್ತಿಡು ಎಂದು ಕಟ್ಟಪ್ಪಣೆ ಮಾಡಿ ಆ ವಿಷಯವಾಗಿ ತಾನು ಮಾಡತಕ್ಕ ಕಾರ್ಯ ಭಾಗಗಳನ್ನೆಲ್ಲ ನೆರವೇರಿಸಿ ಏನೂ ಅರಿಯದವನಂತೆ ಇರತೊಡಗಿದನು.

ಇತ್ತ ಕಣವಿ ಮಾರುತೀ ಕ್ಷೇತ್ರದಲ್ಲಿಳಿದ ಅಪ್ಪಯ್ಯದೀಕ್ಷಿತರು ಕೃಷ್ಣದೇವರಾಯನು ತಮ್ಮನ್ನು ಕರೆಸಿಕೊಳ್ಳುವನೆಂದು ದಾರೀನೋಡಲಾರಂಭಿಸಿದರು. ಯಾಕಂದರೆ ವಿಜಯನಗರದ ಪಂಡಿತರು ಈ ಮೊದಲೇ ರಾಜನಿಗೆ ನಾನು ಬರುವೆನೆಂಬ ಸುದ್ದಿಯನ್ನು ತಿಳಿಸಿದ್ದರಿಂದ ರಾಜನು ನನ್ನ ಶೋಧದಲ್ಲಿರಬಹುದೆಂದು ಅವರು ಭಾವಿಸಿದರು. ತಾತಾಚಾರ್ಯರ ಕಾರಸ್ಥಾನದಮೂಲಕವಾಗಿ ವಿಜಯನಗರದ ಪಂಡಿತರಿಗೆ ರಾಜನಿಗೆ ಸುದ್ದಿಯನ್ನು ಮುಟ್ಟಿಸುವದು ಅಶಕ್ಯವಾಯಿತು. ಪಟ್ಟಣದಿಂದ ಹೊರಟು ದೀಕ್ಷಿತರ ಬಳಿಗೆ ಹೋಗುವದಕ್ಕೂ ಅವಕಾಶವಿಲ್ಲದಾಯಿತು. ಆದ್ದರಿಂದ ಅವರು ಮನಸ್ಸಿನಲ್ಲಿ ಚಡಪಡಿಸುತ್ತ ಮನೆಯಲ್ಲಿರಬೇಕಾಯಿತು. ಈ ಸಂಗತಿಯು ಅಪ್ಪಯ್ಯ ದೀಕ್ಷಿತರಿಗೆ ತಿಳಿಯುವ ಬಗೆ ಹ್ಯಾಗೆ? ಒಂದು ದಿನವಾಯಿತು. ಎರಡು ದಿನಗಳಾದವು ದಿನದ ಮೇಲೆ ದಿನವು ಹೋಗುತ್ತ ಎಂಟು ದಿನಗಳು ಕ್ರಮಿಸಿದವು. ದೀಕ್ಷಿತರವರ ಪರಾಮರಿಕೆಗೆ ರಾಯರ ಕಡೆಯಿಂದ ಒಬ್ಬನೂ ಬರಲಿಲ್ಲ. ದೀಕ್ಷಿತರಿಗೆ ಪರಮಾಶ್ಚರ್ಯವಾಯಿತು. ಕೃಷ್ಣದೇವರಾಯನಂಥ ವಿದ್ಯಾಪಕ್ಷಪಾತಿಯಾದ ರಾಜನು ಹೀಗೆ ನಮ್ಮನ್ನು ಉದಾಸೀನ ಮಾಡಲು ಕಾರಣವೇನು? ಎಂದು ಯೋಚಿಸಿ ತಮ್ಮ ಒಬ್ಬ ಶಿಷ್ಯನನ್ನು ಕರೆದು "ನೀನು ಹೋಗಿ ರಾಯರಿಗೆ ನಾವು ಬಂದ ವರ್ತಮಾನವನ್ನು ತಿಳುಹಿಸು. ಇದರ ಮೇಲೂ ಅವರು ನಮ್ಮನ್ನು ಆಮಂತ್ರಿಸದಿದ್ದರೆ ಮುಂದೆ ನೋಡೋಣ"

ಎಂದು ಹೇಳಿಕಳಿಸಿದರು. ಆ ಶಿಷ್ಯನು ಮಾರ್ಗಾಕ್ರಮಣ ಮಾಡಿ ಬಹು ವಿಸ್ತೀರ್ಣವಾದ ಆ ನಗರಿಯನ್ನು ಪ್ರವೇಶಿಸಿ, ಅರಮನೆಯ ಬಳಿಗೆ ಹೋದನು. ಆತನು ಮೈತುಂಬ ಧರಿಸಿದ ವಿಭೂತಿಯನ್ನು ನೋಡಿ ದ್ವಾರರಕ್ಷಕನು ಆತನನ್ನು ಒಳಗೆ ಬಿಡದಾದನು. ಶಿಷ್ಯನು ನಿರುಪಾಯನಾಗಿ ಹೊರಗೆ ಕುಳಿತು ಕೊಂಡನು. ಅಷ್ಟರಲ್ಲಿ ಒಬ್ಬ ಜೋಯಿಸನು ರಾಜಸನ್ನಿಧಿಗೆ ಹೋಗುವದಕ್ಕಾಗಿ ಅಲ್ಲಿಗೆ ಬಂದನು. ದೀಕ್ಷಿತರವರ ಶಿಷ್ಯನು ಅವನನ್ನು ನೋಡಿ "ಸ್ವಾಮಿ, ನಾನು ಅಪ್ಪಯ್ಯ ದೀಕ್ಷಿತರವರ ಶಿಷ್ಯನು. ನಾನು ರಾಯರನ್ನು ಕಾಣಬೇಕಾಗಿದೆ. ನೀವು ಕರೆದುಕೊಂಡು ಹೋಗುವಿರಾ? ಎಂದು ಕೇಳಿದನು. ಜೋಯಿಸನು—ತಮ್ಮಾ, ಈಗ ಇಲ್ಲಿ ಸ್ಮಾರ್ತರ ಆಟ ನಡೆಯುವದಿಲ್ಲ. ನಿನ್ನನ್ನು ಈ ಕಾವಲುಗಾರರು ಒಳಗೆ ಬಿಡಲಾರರು. ನಾನು ರಾಯರ ಸಮಯವನ್ನು ತಿಳಿದು ಉಪಾಯಾಂತರಗಳಿಂದ ಒಳಗೆ ಕರೆದೊಯ್ಯುವೆನು ಅಲ್ಲಿಯವರೆಗೆ ನೀನು ಇಲ್ಲಿಯೇ ಕಾದಿರು ಎಂದು ರಹಸ್ಯವಾಗಿ ಹೇಳಿ ಹೊರಟು ಹೋದನು.

ಈ ಸಂಗತಿಯ ಶ್ರವಣದಿಂದ ದೀಕ್ಷಿತರ ಶಿಷ್ಯನ ಕಣ್ಣುಗಳು ನಿಚ್ಚಳವಾಗಿ ತೆರೆದವು. ಇನ್ನು ಇಲ್ಲಿ ನಿಲ್ಲುವದು ಸರಿಯಲ್ಲವೆಂದು ತಿಳಿದು ಕೂಡಲೆ ಹಿಂತಿರುಗಿ ಗುರುಗಳ ಬಳಿಗೆ ಬಂದು ನಡೆದ ಸಂಗತಿಯನ್ನೆಲ್ಲ ಬಿನ್ನವಿಸಿದನು. ಶಿಷ್ಯನು ಹೇಳಿದ ಮಾತುಗಳನ್ನು ದೀಕ್ಷಿತರು ಶಾಂತ ಮನಸ್ಸಿನಿಂದ ಕೇಳಿಕೊಂಡು ತಮ್ಮಾ ಇದು ತಾತಾಚಾರ್ಯರ ಕಾರಸ್ಥಾನವು. ಅವರ ವ್ಯವಹಾರ ಕೌಶಲ್ಯವು ನನಗೆ ಗೊತ್ತಿರುವದು. ನೀನು ಬಂದದ್ದು ಬಹಳ ನೆಟ್ಟಗಾಯಿತು. ಇಕೋ ಈ ವಿಭೂತಿಯನ್ನು ಹಿಡಿ. ಇದನ್ನು ಮೈಗೆ ಚರ್ಚಿಸಿಕೊಂಡು ರಾಜದ್ವಾರಕ್ಕೆ ಹೋಗು. ಯಾವ ಕಾವಲುಗಾರನೂ ನಿನ್ನನ್ನು ತಡೆಯಲಾರನು. ಒಳಗೆ ಪ್ರವೇಶಮಾಡಿದ ಒಳಿಕ ರಾಜನನ್ನು ಕಂಡು ಈ ಪತ್ರವನ್ನು ಅವನ ಮುಂದಿಡು. ಹಾಗು ಬಾಯಿಂದಹೇಳತಕ್ಕ ಸಂಗತಿಗಳನ್ನು ಹೇಳು. ಎಂದು ಅಪ್ಪಣೆಮಾಡಿ ಪತ್ರವನ್ನೂ ವಿಭೂತಿಯನ್ನೂ ಕೊಟ್ಟರು. ಶಿಷ್ಯನು ಅವನ್ನು ತಕ್ಕೊಂಡು ವಿಜಯನಗರಕ್ಕೆ ಬಂದು ಗುರುಗಳ ಅಪ್ಪಣೆಯಂತೆ ವಿಭೂತಿಯನ್ನು ಧರಿಸಿದನು. ಬಳಿಕ ಅವನು ಅರಮನೆಗೆ ಹೋಗಲು ಅಲ್ಲಿ ಕಾವಲುಗಾರರು ಯಥೇಷ್ಟವಾಗಿದ್ದರೂ ನೀನು ಯಾರು ಎಂದು ಯಾರೂ ಮಾತನಾಡಿಸಲಿಲ್ಲ. ಆತನು ನಿರ್ವಿಘ್ನದಿಂದ ಅರಮನೆಯನ್ನು ಹೊಕ್ಕು ಕೃಷ್ಣದೇವರಾಯನನ್ನು ಕಂಡು ದೀಕ್ಷಿತರ ಪತ್ರವನ್ನು ಅವರಕೈಗಿತ್ತು ಒಂದು ಆಸನದ ಮೇಲೆ ಕುಳಿತು

ಕೊಂಡನು. ರಾಯರು ಪತ್ರವನ್ನೋದಿಕೊಂಡು—ಎಲಾ! ನಾನೆಂಥ ತಪ್ಪು ಮಾಡಿದೆನು? ಅಪ್ಪಯ್ಯ ದೀಕ್ಷಿತರಂಥ ಮಹಾತ್ಮ ವಿದ್ವಾಂಸರು ಕಣವೇ ಮೂರು ತೀಕ್ಷ್ಣೇತ್ರದಲ್ಲಿ ಬಂದಿಳಿದು ಎಂಟುದಿವಸಗಳಾದರೂ ನನಗೆ ಸುದ್ದಿ ಹತ್ತಬಾರದೆಂದರೆ ಪರಮ ಆಶ್ಚರ್ಯವೇ ಸರಿ! ತಾತಾಚಾರ್ಯರು ನನಗೆ ಈ ಸಂಗತಿಯನ್ನು ತಿಳಿಸಲೇ ಇಲ್ಲ. ಛೀ, ನನ್ನಿಂದ ಮಹದಪರಾಧವಾಯಿತು. ಎಂದು ನುಡಿದು ದೀಕ್ಷಿತರ ಶಿಷ್ಯನನ್ನು ಕುರಿತು—ವಿಪ್ರವರ್ಯನೇ, ನನಗೆ ದೀಕ್ಷಿತರು ದಯಮಾಡಿಸಿದ ಸಂಗತಿಯೇ ಗೊತ್ತಾಗಿರುವದಿಲ್ಲ. ವಿನಾಕಾರಣ ಆ ಮಹಾತ್ಮರಿಗೆ ತೊಂದರೆಯಾಯಿತು; ಈಗಲೇ ಮಂತ್ರಿಯನ್ನೂ ಪಲ್ಲಕ್ಕಿಯನ್ನೂ ಕಳಿಸಿ ದೀಕ್ಷಿತರನ್ನು ಕರೆಸಿಕೊಳ್ಳುವೆನು ಎಂದು ನುಡಿದು ರಾಮಾಯಣದ ಪಾರಾಯಣ ಮುಗಿಸಿ ಆಚಾರ್ಯರನ್ನು ಕರೆಯಿಸಿದನು. ಆಚಾರ್ಯರು ಬರಲು ರಾಯರು ನುಡಿದರೇನಂದರೆ—"ಆಚಾರ್ಯರೇ! ನಿಮ್ಮಿಂದ ನಮ್ಮ ರಾಜ್ಯಕ್ಕೆ ಕ್ಷೇಮವೊದಗುವದಿಲ್ಲ. ಅಪ್ಪಯ್ಯ ದೀಕ್ಷಿತರು ಬಂದು ಎಂಟುದಿನಗಳಾದವಂತೆ ನಮಗೆ ಸುದ್ದಿಯನ್ನು ಸಹ ತಿಳಿಸಬಾರದೇನು?"

ಕೃಷ್ಣದೇವರಾಯರ ಮಾತುಗಳನ್ನು ಕೇಳಿ ಆಚಾರ್ಯರು ಹೀಗೇನು? ನನಗೂ ಈ ಸಂಗತಿಯು ಗೊತ್ತಿರುವದಿಲ್ಲ ಎನಲು ರಾಯರು ಆಚಾರ್ಯರಿಗೆ ಒಂದು ಪತ್ರವನ್ನು ಕೊಟ್ಟರು ಅದರಲ್ಲಿ ದೀಕ್ಷಿತರು ತಾತಾಚಾರ್ಯರವರನ್ನು ಸಂಬೋಧಿಸಿ—ನೀವು ಸ್ಮಾರ್ತರ ಹುಟ್ಟನ್ನೇ ಹುರಿದುಬಿಡಬೇಕೆಂದು ಸಂಕಲ್ಪಿಸಿರುವಿರಂತೆ! ಒಳ್ಳೇ ಕೆಲಸಮಾಡಿದಿರಿ! ಪರಂಪರೆಯಿಂದ ಶೈವಸಾಂಪ್ರದಾಯವನ್ನವಲಂಬಿಸಿದ್ದ ವಿಜಯನಗರದ ಸಾಮ್ರಾಜ್ಯಾಧಿಪತಿಗಳನ್ನು ನಿಮ್ಮ ಮತಕ್ಕೆ ಎಳೆದುಕೊಂಡು ನನಗೆ ಯಾರೂ ಎದುರಿಲ್ಲವೆಂದು ಸ್ಮಾರ್ತರಿಗೆ ಪೀಡೆಯನ್ನುಂಟುಮಾಡತೊಡಗಿರುವಿರಾ? ಈಗ ನಾನು ನಿಮ್ಮ ಮತ ಖಂಡನೆಗಾಗಿ ಬಂದಿರುತ್ತೇನೆ ಪಾಂಡಿತ್ಯವಿದ್ದರೆ ನನ್ನೊಡನೆ ವಾದವ ಹೂಡಿರಿ ಎಂದು ಬರೆದಿದ್ದರು. ಈ ಪತ್ರವನ್ನೋದಿ ಆಚಾರ್ಯರು ಇಳಿದು ಹೋಗಿ ರಾಯರನ್ನು ಕುರಿತು—ಏನು ಮಾಡಬೇಕು ಕಠಿಣಪ್ರಸಂಗವು ಬಂದಿತು. ಅಪ್ಪಯ್ಯದೀಕ್ಷಿತರು ಮಹಾಬಲಿಷ್ಠರು; ೧೬ವರುಷ ವಯಸ್ಸಿನಲ್ಲಿಯೇ ಮಾಧ್ವ ಹಾಗು ಶ್ರೀವೈಷ್ಣವ ಮತಗಳನ್ನು ಖಂಡಿಸುವಂಥ ಗ್ರಂಥಗಳನ್ನು ಬರೆದು ಕಾಂಚಿಯಲ್ಲಿಯ ಸರ್ವತೀರ್ಥದ ತೀರದಲ್ಲಿ ಜಯಸ್ತಂಭವನ್ನು ನಿಲ್ಲಿಸಿ ಪಂಡಿತ ಸಾರ್ವಭೌಮನೆಂದು ಹೊಗಳಿಸಿಕೊಂಡಿರುವರು. ಇಂಥವರ ಮುಂದೆ ಉತ್ತರಕೊಡುವದು ನನಗಂತೂ ಅಸಾಧ್ಯವು; ನೀವು

ಶ್ರೀವೈಷ್ಣವ ಮತದ ಅಭಿಮಾನಿಗಳಿದ್ದೀರಿ ಈ ಪ್ರಸಂಗದಲ್ಲಿ ನಮ್ಮನ್ನು ಪಾರು ಮಾಡುವದು ನಿಮ್ಮನ್ನೇ ಕೂಡಿದೆ ಎಂದು ನುಡಿದರು. ಆಗ ಕೃಷ್ಣದೇವರಾಯರು ತಾತಾಚಾರ್ಯರಿಗೆ ಸಮಾಧಾನದ ಕ್ತಿಗಳನ್ನು ಹೇಳಿ ಅವರನ್ನು ಮನೆಗೆ ಕಳುಹಿಸಿ, ದೀಕ್ಷಿತರನ್ನು ಕರೆಯಿಸದೆ ಇರುವದು ಅವರ ಕ್ಷೋಭಕ್ಕೆ ಕಾರಣವು; ಅವರು ಶಾಪಾನುಗ್ರಹ ಸಮರ್ಥರು ಕರೆಯಿಸಬೇಕು, ಎಂದು ನಿರ್ಧರಿಸಿ ಅಪ್ಪಾಜಿಯೆಂಬ ಮಂತ್ರಿಶ್ರೇಷ್ಠನನ್ನು ಕರೆಯಿಸಿ ದೀಕ್ಷಿತರ ಸನ್ನಿಧಿಗೆ ಹೋಗಿ ತಾವು ಬಂದಸಂಗತಿಯು ಗೊತ್ತಾಗದ್ದಕ್ಕೆ ಕ್ಷಮೆಯನ್ನು ಕೇಳಿಕೊಂಡು ಸಕಲ ಮಾನಮರ್ಯಾದೆಗಳಿಂದ ಅವರನ್ನು ಊರಿನೊಳಗೆ ಕರೆತರಬೇಕು ಎಂದು ಆಜ್ಞಾಪಿಸಿದನು. ಆದಿನ ಸಾಯಂಕಾಲದಲ್ಲಿಯೇ ಮಂತ್ರಿವರ್ಯನು ದೀಕ್ಷಿತರ ಶಿಷ್ಯನೊಡನೆ ಯಥೋಚಿತ ಮರ್ಯಾದೆಯೊಂದಿಗೆ ಕಣಗೀ ಮಾರುತೀ ಕ್ಷೇತ್ರಕ್ಕೆ ಹೊರಟನು.

ಇತ್ತ ವಿಜಯನಗರದಲ್ಲಿ ತಾತಾಚಾರ್ಯರಿಗೆ ಸ್ವಲ್ಪವೂ ಸಮಾಧಾನವಿಲ್ಲದಾಯಿತು. ಭಸ್ಮ-ರುದ್ರಾಕ್ಷಿಗಳನ್ನು ಧರಿಸಿದ ಶೈವಬ್ರಾಹ್ಮಣಂಗೆ ರಾಜನು ತುಂಬಾ ಸನ್ಮಾನಮಾಡಿದ್ದನ್ನು ನೋಡಿಯೇ ಆತನ ಹೊಟ್ಟೆಯಲ್ಲಿ ನಾಸುವೆ ಅರೆದು ಹಚ್ಚಿದಂತಾಗಿತ್ತು. ಮನೆಯಲ್ಲಿ ಆತನಿಗೆ ಸಮಾಧಾನವಾಗದ್ದರಿಂದ ಮತ್ತೆ ಅವನು ರಾಯರ ಬಳಿಗೆ ಬಂದನು. ರಾಯರು ಏಕಾಂತದಲ್ಲಿ ಒಬ್ಬರೇ ಕುಳಿತಿರುವದನ್ನು ತಿಳಿದು ಅಲ್ಲಿಗೆ ಹೋಗಿ—ದೀಕ್ಷಿತರು ತಮ್ಮಲ್ಲಿಗೆ ಒಂದುವೇಳೆ ಅವರು ಶೈವಮತವನ್ನು ಸ್ಥಾಪಿಸುವದು ನಿಜ; ಅವರ ಮುಂದೆ ಯಾರೂ ನಿರ್ವಹಿಸಲಾರರು. ಒಂದು ವೇಳೆ ನೀವು ಅವರ ಮಾತನ್ನು ಕೇಳಿದರೂ ಎಂದಿನಂತೆಯೇ ನನ್ನಲ್ಲಿ ವಿಶ್ವಾಸವಿಟ್ಟಿರಬೇಕು ಎಂದು ಅಂಗಲಾಚಿ ಬೇಡಿಕೊಂಡನು. ರಾಯರು ಶುದ್ಧಸಾತ್ವಿಕ ಸ್ವಭಾವದವರು. ಮಂದಿಯ ಮನಸ್ಸನ್ನು ನೋಯಿಸಲು ಹಿಂತೆಗೆಯುವ ಮನಸ್ಸಿನವರು. ಆದ್ದರಿಂದ ಅವರು—ದೀಕ್ಷಿತರು ದಯಮಾಡಿಸಿದರೂ ನಿಮ್ಮ ಮಾನ-ಮರ್ಯಾದೆಗಳನ್ನು ನಿಮಗೆ ನಡಿಸುವೆನು; ಹಾಗು ನಿಮ್ಮಲ್ಲಿ ವಿಶ್ವಾಸದಿಂದಲೇ ನಡೆಯುವೆನು; ಎಂದು ಆಚಾರ್ಯರಿಗೆ ಅಭಯವನ್ನಿತ್ತರು. ರಾಯರ ಆಶ್ವಾಸನದಿಂದ ಆಚಾರ್ಯರು ಸ್ವಲ್ಪ ಸಮಾಧಾನವನ್ನು ಹೊಂದಿದರು.

ಅಪ್ಪಾಜಿಮಂತ್ರಿಯು ದೀಕ್ಷಿತರನ್ನು ಕಂಡು ಸರ್ವಸಂಗತಿಗಳನ್ನು ನಿವೇದಿಸಿ ಆ ದಿನ ಅಲ್ಲಿಯೇ ಇದ್ದು, ಮರುದಿನ ದೀಕ್ಷಿತರೊಡನೆ ವಿಜಯನಗರಕ್ಕೆ

ಹೊರಟನು. ಆಗ ದೀಕ್ಷಿತರವರು ಪಲ್ಲಕ್ಕಿಯಲ್ಲಿ ಕುಳಿತಿದ್ದರು. ಪಂಡಿತಸಾರ್ವಭೌಮ ಛತ್ರವು ಪಲ್ಲಕ್ಕಿಯಮೇಲೆ ವಿರಾಜಿಸುತ್ತಿತ್ತು. ಶಿಷ್ಯರು ಎಡಬಲಗಳಲ್ಲಿ ಚಾಮರಗಳನ್ನು ಬೀಸುತ್ತಿದ್ದರು ಅವರ ಐದು ನೂರು ಜನ ಶಿಷ್ಯರು ಪಲ್ಲಕ್ಕಿಯ ಮುಂಭಾಗದಲ್ಲಿ ನಡೆದಿದ್ದರು. ಗ್ರಂಥಭಾಂಡಾರವನ್ನು ಹೊತ್ತಿರುವ ಆನೆ-ಕುದುರೆಗಳು ಸಾವಕಾಶವಾಗಿ ನಡೆದಿದ್ದವು. ರಾಯರಿಂದ ಕಳುಹಲ್ಪಟ್ಟ ರಾವುತರೂ ಕಾಲಾಳುಗಳೂ ಪಲ್ಲಕ್ಕಿಯ ಎಡಬಲಗಳಲ್ಲಿ ಶಿಸ್ತಿನಿಂದ ಸಾಗಿದ್ದರು. ಈ ಚಂದದಿಂದ ಪಲ್ಲಕ್ಕಿಯು ವಿಜಯನಗರದ ಸಮೀಪಕ್ಕೆ ಬಂದಿತು; ಅಲ್ಲಿ ಕೃಷ್ಣದೇವರಾಯರು [illegible] ವ್ಯಸನದೊಡನೆ ನಿಂತುಕೊಂಡು ದೀಕ್ಷಿತರವರ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದರು. ದೀಕ್ಷಿತರವರು ಬರಲು ರಾಜನು ಅವರನ್ನು ಎದಿರ್ಗೊಂಡು ದರ್ಶನಹೊಂದಿ ಪಾದಚಾರಿಯಾಗಿ ಅವರ ಪಲ್ಲಕ್ಕಿಯ ಮುಂದೆ ಹೊರಟು ನಗರಪ್ರವೇಶಮಾಡಿ ಗೊತ್ತುಪಡಿಸಿದ ಮಂದಿರದಲ್ಲಿ ಅವರನ್ನು ಇಳಿಸಿ ತಕ್ಕ ಉಪಚಾರಗಳನ್ನು ಮಾಡಿ ಅಪ್ಪಣೆಪಡೆದು ರಾಜರು ಅರಮನೆಗೆ ತೆರಳಿದರು. ಇತ್ತ ಅಪ್ಪಯ್ಯದೀಕ್ಷಿತರು ಆ ರಾಜಭವನದಲ್ಲಿ ವಾಸಿಸಿ ಮಧ್ಯಾಹ್ನ ಆಹ್ನಿಕದಲ್ಲಿ ರತರಾದರು.

---

## [೨]

ಮರುದಿನ ಪ್ರಾತಃಕಾಲದಲ್ಲಿ ರಾಯರ ಅಪ್ಪಣೆಯಂತೆ ಅಪ್ಪಾಜಿಯೂ ತೆನ್ನಾಲರಾಮಕೃಷ್ಣನೂ ದೀಕ್ಷಿತರವರ ಬಳಿಗೆ ಬಂದು—ಕೃಷ್ಣದೇವರಾಜರು ತಮಗೆ ಅರಮನೆಗೆ ದಯಮಾಡಿಸುವಂತೆ ಬಿನ್ನಹ ಮಾಡಿಕೊಂಡಿದ್ದಾರೆ ಎಂದು ಪ್ರಾರ್ಥಿಸಿದರು. ದೀಕ್ಷಿತರವರು ಅಗ್ನಿಹೋತ್ರಕರ್ಮಗಳನ್ನು ನೆರವೇರಿಸಿ ಜಪವನ್ನು ಮಾಡುತ್ತ ಕುಳಿತಿದ್ದರು. ರಾಯರ ನಿರೂಪವನ್ನು ಕೇಳಿದ ಕೂಡಲೆ ಸಕಲ ಮಾನಮರ್ಯಾದೆಗಳೊಂದಿಗೆ ಅರಮನೆಗೆ ದಯಮಾಡಿಸಿದರು. ಹೆಬ್ಬಾಗಿಲ ಬಳಿಯಲ್ಲಿ ರಾಯರು ಪರಿವಾರ ಸಮೇತರಾಗಿ ನಿಂತಿದ್ದು ದೀಕ್ಷಿತರವರಿಗೆ ದಂಡವತ್ ಪ್ರಣಾಮಮಾಡಿ ಅವರನ್ನು ಅರಮನೆಯಲ್ಲಿ ಕರೆದುಕೊಂಡು ಹೋದರು. ಒಳಗೆ ತಾತಾಚಾರ್ಯರು ಶ್ರೇಷ್ಠಾಸನದಲ್ಲಿ ಕುಳಿತುಕೊಂಡಿದ್ದರು. ದೀಕ್ಷಿತರವರನ್ನು ಕಂಡಕೂಡಲೆ ಆಚಾರ್ಯರವರಿಗೆ ಆ ಶ್ರೇಷ್ಠಪೀಠದಲ್ಲಿ ಕುಳಿತುಕೊಳ್ಳಲಿಕ್ಕೆ ಧೈರ್ಯಸಾಲಲಿಲ್ಲ. ಆಗ ಅವರು ಆ ಉನ್ನತಾಸನವನ್ನು ದೀಕ್ಷಿತರಿಗಾಗಿ

ಬಿಟ್ಟುಕೊಟ್ಟು ತಾವು ಹಿಂಭಾಗದಲ್ಲಿ ಸಾಮಾನ್ಯವಾದುದೊಂದು ಆಸನದ ಮೇಲೆ ಕುಳಿತುಕೊಂಡರು. ರಾಜನು ದೀಕ್ಷಿತರವರನ್ನು ಶ್ರೇಷ್ಠಾಸನದಲ್ಲಿ ಕುಳ್ಳಿರಿಸಿ ರಾಜಪದ್ಧತಿಯಂತೆ ಅವರನ್ನು ಸತ್ಕರಿಸಿದನು. ಆ ದಿನ ದೀಕ್ಷಿತರವರು ವಿಶೇಷ ಪ್ರಸ್ತಾಪವನ್ನು ತೆಗೆಯಲಿಲ್ಲ. ತಾತಾಚಾರ್ಯರೊಡನೆ ಸಾಮಾನ್ಯವಾಗಿ ಪ್ರಸಂಗಕ್ಕೆ ತಕ್ಕಹಾಗೆ ಮಾತನಾಡಿ ಮಾಧ್ಯಾಹ್ನಿಕಕ್ಕಾಗಿ ವಸತಿಗೃಹಕ್ಕೆ ತೆರಳಿದರು.

ಮರುದಿನ ರಾಯರವರ ನಾಮತೀರ್ಥದ ಹೊತ್ತಿಗೆ ಅಪ್ಪಯ್ಯದೀಕ್ಷಿತರವರು ಅರಮನೆಗೆ ಬಂದರು. ತಾತಾಚಾರ್ಯರೂ ಇನ್ನುಳಿದ ವಿಶಿಷ್ಟಾದ್ವೈತ ಪಂಡಿತರೂ ಈ ಮೊದಲೇ ಬಂದು ಕುಳಿತಿದ್ದರು. ದೀಕ್ಷಿತರವರ ಸಂಗಡ ವಿಜಯನಗರದ ಶೈವಪಂಡಿತರೆಲ್ಲರೂ ಬಂದಿದ್ದರು ದೀಕ್ಷಿತರವರ ಬೆಂಬಲವಿದ್ದದರಿಂದ ಆ ಪಂಡಿತರ ಮುಖದಲ್ಲಿ ಒಂದು ಬಗೆಯ ತೇಜವು ಚಮಕಿಸುತ್ತಿತ್ತು. ದೀಕ್ಷಿತರವರು ಬಂದ ಕೂಡಲೆ ಸಭೆಯು ನಿಶ್ಶಬ್ದವಾಯಿತು. ದೀಕ್ಷಿತರು ಆಸನಸ್ಥರಾದರು ಈ ದಿನ ದೀಕ್ಷಿತರವರಿಗೂ ತಮಗೂ ಮತವಿಚಾರದಲ್ಲಿ ಪ್ರಸಂಗ ನಡೆಯುವದೆಂಬದು ತಾತಾಚಾರ್ಯರಿಗೆ ಗೊತ್ತಾಗಿತ್ತು. ಅವರು ಧೂರ್ತರಿದ್ದದರಿಂದ ತಾವಾಗಿಯೇ ದೀಕ್ಷಿತರನ್ನು ಕೆಣಕಿ ಪ್ರಸಂಗನಡಿಸಿದಂತೆ ಜನರಿಗೆ ಭಾಸವಾಗಲೆಂದು ಅರಸನನ್ನು ಕುರಿತು—ಅಪ್ಪಯ್ಯದೀಕ್ಷಿತರು ಶೈವಮತ ಸ್ಥಾಪಿಸಿ ವೈಷ್ಣವಮತವನ್ನು ಖಂಡಿಸಿರುವರೆಂದು ಕೇಳಿರುವೆವು. ಈ ದಿನ ಸ್ವಲ್ಪ ಹೊತ್ತು ನನಗೂ ಅವರಿಗೂ ಪ್ರಸಂಗ ನಡೆಯಬೇಕಾಗಿರುವದು. ಈ ವಿಷಯದಲ್ಲಿ ತಾವು ಮಧ್ಯಸ್ಥವನ್ನು ವಹಿಸಿ ಇದಿರುಪಕ್ಷದವರು ತಿರಸ್ಕರಿಸದಂತೆ ನೋಡಿಕೊಳ್ಳಬೇಕು. ಎಂದು ಹೇಳಿ ದೀಕ್ಷಿತರೊಡನೆ ಪ್ರಸಂಗವನ್ನು ನಡಿಸಿದರು.

ಆಚಾರ್ಯರ ಈ ಕೃತಿಯಿಂದ ದೀಕ್ಷಿತರವರು ತುಂಬಾ ಸಂತುಷ್ಟರಾದರು. ನಾನು ವಿರಿಂಚಿಯಿಂದ ಇಲ್ಲಿಯವರೆಗೆ ಇದಕ್ಕಾಗಿಯೇ ಬಂದಿರುವೆನು; ಎಂತು ನುಡಿದು ಆಚಾರ್ಯರವರ ಪೂರ್ವಪಕ್ಷವನ್ನು ಖಂಡಿಸಿ ನಾಲ್ಕುಗಳಿಗೆಯವರೆಗೆ ಅಸ್ಖಲಿತವಾದ ವಾಣಿಯಿಂದ ಮಾತನಾಡಿ ಅದ್ವೈತಸಿದ್ಧಾಂತಗಳ ಅಬಾಧಿತತ್ವವನ್ನು ಸಿದ್ಧಗೊಳಿಸಿದರು. ಆಚಾರ್ಯರವರು ಎಷ್ಟು ಬಗಿದಾಡಿದರೂ ದೀಕ್ಷಿತರ ಮುಂದೆ ನಿರುತ್ತರರಾದರು. ಇದುವರೆಗೆ ಆಸ್ಥಾನದೊಳಗಿನ ಸರ್ವಶೈವಪಂಡಿತರನ್ನು ಗೆದ್ದು ವಿಜಯಪತಾಕೆಯನ್ನು ಮೆರೆಯಿಸಿದ ತಾತಾಚಾರ್ಯರೇ ದೀಕ್ಷಿತರ ಮುಂದೆ ಕೈಯೂರಿದಾಗ ಉಳಿದ ವಿಶಿಷ್ಟಾದ್ವೈತಪಂಡಿತರನ್ನು ಕೇಳ್ಳು

ವವರಾರು? ಸಮಸ್ತ ವೈಷ್ಣವ ಪಂಡಿತರೂ ಮೂಕರಂತೆ ಕುಳಿತುಬಿಟ್ಟರು. ಕೃಷ್ಣದೇವರಾಯನಿಗೆ ತಿಳಿದುಹೋಯಿತು. ದೀಕ್ಷಿತರಿಗೂ ಆಚಾರ್ಯರಿಗೂ ಸಾಮ್ಯವನ್ನು ಹೇಳಬೇಕಾದರೆ ಹಸ್ತಿ-ಮಶಕದ ಸಾಮ್ಯವನ್ನೇ ಹೇಳಬಹುದೆಂದು ಅಂದುಕೊಂಡರು. ಆಚಾರ್ಯರ ಮುಖವು ಕಪ್ಪಿಟ್ಟಿತು. ನಾಲಿಗೆಯು ತೊದಲಿಸಹತ್ತಿತು. ದೀಕ್ಷಿತರವರು ಪರಾಕ್ರಮವನ್ನು ತೋರಲೆಳಸಿದ ಸಿಂಹನಂತೆ ತೋರಿದರು. ಅವರು ಪ್ರತಿಪಕ್ಷಗಳಿಗೆ ಪ್ರತಿಕೋಟಿಯನ್ನು ಹೇಳಿರೆಂದು ಪ್ರತಿಭಟಿಸಿದರು. ಆದರೆ ಮಾತಾಡುವ ಸಾಮರ್ಥ್ಯವು ಯಾರಿಗಿರುವದು? ಎಲ್ಲರೂ ಮೌನವ್ರತಸ್ಥರೇ! ಆಗ ದೀಕ್ಷಿತರವರು ಸ್ವಲ್ಪ ಸಿಟ್ಟಿನಿಂದ—ಏನು ತಾತಾಚಾರ್ಯರೇ, ನಿಮ್ಮ ವಾಣಿಯು ಕುಂಠಿಸಿತೋ? ಯಾಕೆ ಬಾಯುಮುಚ್ಚಿಕೊಂಡು ಕುಳಿತಿರಿ? ನಿಮ್ಮಲ್ಲಿ ವಿದ್ಯಾಪೌರುಷವಿದ್ದರೆ ಮಾತನಾಡಿರಿ. ನನ್ನ ಕೋಟಿಕ್ರಮವನ್ನು ಖಂಡಿಸಿರಿ. ಎಂದು ನುಡಿದರು. ದೀಕ್ಷಿತರು ಏನೆಂದರೂ ಆಚಾರ್ಯರು ಸುಮ್ಮನಿದ್ದರು; ಅವರು ದೀಕ್ಷಿತರಿಂದ ಸಂಪೂರ್ಣ ಪರಾಜಿತರಾದರೆಂದು ರಾಜನು ನಿರ್ಣಯಿಸಿದನು.

ಬಳಿಕ ದೀಕ್ಷಿತರು ಸಭಿಕರನ್ನೂ, ರಾಜನನ್ನೂ ಉದ್ದೇಶಿಸಿ ಕೆಲವು ಬೋಧಪರ ಮಾತಗಳನ್ನಾಡಿದರು. ಅವರು ಹೇಳಿದ್ದೇನಂದರೆ—ನಾನೇ ಶ್ರೇಷ್ಠನೆಂದು ಯಾರೂ ಅಹಂಭಾವ ತಾಳಬಾರದು. ಹಾಗು ಮತವೈಷಮ್ಯಬುದ್ಧಿಯನ್ನು ತಂದುಕೊಳ್ಳಬಾರದು. ಯಾವದೊಂದು ಮತಸಿದ್ಧಾಂತಗಳ ವಿಷಯವಾಗಿ ಶಾಸ್ತ್ರದೃಷ್ಟಿಯಿಂದ ಬೇಕಾದಷ್ಟು ಚರ್ಚೆಮಾಡಬಹುದು. ತಮ್ಮಲ್ಲಿ ಪ್ರತಿಭಾಶಕ್ತಿಯಿದ್ದಮೇರೆಗೆ ತಮಗೆ ಸರಿದೋರಿದ ಮತಸಿದ್ಧಾಂತಗಳ ಮೇಲ್ಮೆಯನ್ನು ಸಿದ್ಧಮಾಡಿ ಅನ್ಯಮತಗಳ ಸಿದ್ಧಾಂತಗಳನ್ನು ಖಂಡಿಸಬಹುದು. ಈ ವಾದವಿವಾದವು ಶಾಸ್ತ್ರಕಾಲದಲ್ಲಿ ಐಕ್ಯವಾಗಬೇಕಲ್ಲದೆ ವ್ಯವಹಾರದಲ್ಲಿ ದ್ವೇಷರೂಪದಿಂದ ಪ್ರಕಟವಾಗಬಾರದು. ಹಾಗು ತಾವು ನಂಬಿದ ಮತವನ್ನೇ ಸ್ವೀಕರಿಸಬೇಕೆಂದು ಅನ್ಯರಿಗೆ ಒತ್ತಾಯ ಮಾಡಕೂಡದು. ತಾತಾಚಾರ್ಯರು ದೊಡ್ಡ ವಿದ್ಯಾವಂತರಾದರೂ ಈ ವಿಷಯದಲ್ಲಿ ತಪ್ಪಿದರು. ತಮ್ಮ ಮತವನ್ನೇ ಸರ್ವತ್ರದಲ್ಲಿ ಹರಡಬೇಕೆಂದು ಆಸುರೀ ಲಾಲಸೆಯನ್ನು ತಾಳಿ ಶೈವರ ದ್ವೇಷಮಾಡಲಾರಂಭಿಸಿದರು. ಅದ್ವೈತಸಿದ್ಧಾಂತಗಳು ತಮ್ಮ ಮನಸ್ಸಿಗೆ ಬಾರದಿದ್ದಮಾತ್ರಕ್ಕೆ ಅದ್ವೈತಿಗಳನ್ನು ನಿಂದಿಸಬೇಕೆಂದೂ ಅವರಿಗೆ ದುಃಖಗಳನ್ನಾಡಬೇಕೆಂದೂ ಎಲ್ಲಿ ಹೇಳಿರುವದು? ಮತ್ಸರವು ಆಸುರೀಲಕ್ಷಣವು. ಬ್ರಾಹ್ಮಣಮಾತ್ರರಾದವರು ಈ ಮತ್ಸರಪಿಶಾಚಿಯೊಡನೆ ವ್ಯವಹರಿಸಬಾರದು.

ಈಗ ನನ್ನಿಂದ ತಾತಾಚಾರ್ಯರು ಪರಾಜಿತರಾದರು; ನಾನು ಅವರಿಗೆ ಅದ್ವೈತಿಯಾಗೆಂದು ಒತ್ತಾಯ ಮಾಡಬೇಕಾಯಿತಲ್ಲವೇ? ಹೀಗೆ ಮಾಡುವದು ಶಿಷ್ಟಸಮ್ಮತವೆನಿಸಲಾರದು. ಎಲ್ಲ ಸಾಂಪ್ರದಾಯದವರ ಉದ್ದೇಶವು ಒಂದೇಯಾಗಿರುವದು. ಒಂದು ಸಾಂಪ್ರದಾಯದವನನ್ನು ಮತ್ತೊಂದು ಸಾಂಪ್ರದಾಯಕ್ಕೆ ಬಲುಮೆಯಿಂದ ಎಳೆದುಕೊಂಡರೆ ಅವನಲ್ಲಿ ವ್ಯಭಿಚಾರ ದೋಷವನ್ನುಂಟು ಮಾಡಿದಂತಾಗುವದು. ಯಾವನು ಯಾವ ಹೆಸರಿನಿಂದ ಈಶ್ವರೋಪಾಸನೆಮಾಡುವನೋ ಅದೇ ಹೆಸರಿನಲ್ಲಿಯೋ ಅವನ ಪ್ರೇಮವು ಬೆಳೆಯುವಂತೆ ಅವನಿಗೆ ಪ್ರೋತ್ಸಾಹಕೊಡಬೇಕು. ಜಗತ್ತಿಗೆ ಈಶ್ವರನೊಬ್ಬನೇ ಎಂದು ತಿಳಿಯಲಾರದ ಅಜ್ಞಾನಿಗಳು ಮಾತ್ರ ಈ ಹೆಸರು ಶ್ರೇಷ್ಠ ಈ ಹೆಸರು ಕನಿಷ್ಠವೆಂದು ಬಡಿದಾಡುವರು.

ಈ ಮೇರೆಗೆ ದೀಕ್ಷಿತರು ಮಾತನಾಡಲು ತಾತಾಚಾರ್ಯರೊಬ್ಬರನ್ನು ಹೊರತುಪಡಿಸಿ ಮಿಕ್ಕ ಎಲ್ಲರಿಗೂ ಆನಂದವಾಯಿತು. ಕೃಷ್ಣದೇವರಾಯನು ದೀಕ್ಷಿತರ ಶಾಂತ ಹಾಗು ಸರಳಹೃದಯವನ್ನು ತಿಳಿದು ಅವರ ಐಶ್ವರ ತೇಜಸ್ಸಿನಲ್ಲಿ ತುಂಬಾ ಭಕ್ತಿಯನ್ನಿರಿಸಿದನು. ಆಗ ಆತನು ಪೀಠದಿಂದೆದ್ದು ದೀಕ್ಷಿತರಿಗೆ ಪೊಡಮಟ್ಟು ಬೇಡಿಕೊಂಡಸೇನಂದರೆ—ನಾನು ಕುಲಪರಂಪರಾಗತವಾದ ಶೈವ ಸಾಂಪ್ರದಾಯದಲ್ಲಿ ಉದಾಸೀನನಾದದ್ದು ನನಗೆ ಅನುಚಿತ ಕರ್ಮವಾಗಿದೆ. ಆದ ಮಾತಿಗೆ ಇನ್ನು ಚಿಂತಿಸಿಫಲವಿಲ್ಲದ್ದರಿಂದ ಈಗ ಸನ್ನಿಧಿಯಲ್ಲಿ ಕ್ಷಮಾಪಣೆಕೇಳಿಕೊಳ್ಳುತ್ತೇನೆ; ಹಾಗು ತಾವು ಶಾಂತಚಿತ್ತದಿಂದ ಅನುಜ್ಞಾ ಕೊಟ್ಟಹೊರತು ತಾತಾಚಾರ್ಯರು ನನಗೆ ಗುರುಗಳಾಗಿ ಗೌರವದಿಂದ ಇಲ್ಲಿರಲು ಸಾಧ್ಯವಿರುವದಿಲ್ಲ. ನಾನು ಇದುವರೆಗೆ ತಾತಾಚಾರ್ಯರನ್ನು ಗೌರವದಿಂದ ಕಾಣುತ್ತ ಬಂದದ್ದರಿಂದ ಅವರ ಜೀವಮಾನ ಇರುವವರೆಗೆ ಅವರಲ್ಲಿ ನನ್ನ ಪೂಜ್ಯಬುದ್ಧಿಯು ಸ್ಥಿರವಾಗಿ ಉಳಿಯಬೇಕೆಂದು ನನ್ನ ಅಪೇಕ್ಷೆಯದೆ. ಇದಕ್ಕಾಗಿ ತಮ್ಮ ಅನುಜ್ಞೆಯನ್ನು ಕೇಳಿಕೊಳ್ಳುವೆನು.

ರಾಯರ ಈ ಬಗೆಯ ಪ್ರಾರ್ಥನೆಯನ್ನು ಕೇಳಿ ದೀಕ್ಷಿತರಿಗೆ ತುಂಬಾ ಆಶ್ಚರ್ಯವಾಯಿತು. ತಂತ್ರಗಾರನಾದ ತಾತಾಚಾರ್ಯನು ಈತನಿಂದ ಅಭಿವಚನತಕ್ಕೊಂಡಿರಬಹುದಾದ್ದರಿಂದ ಈತನು ಹೀಗೆ ನನಗೆ ಪ್ರಾರ್ಥಿಸಿಕೊಳ್ಳುತ್ತಿರಬಹುದು. ನಮಗೇನು ತಾತಾಚಾರ್ಯನಲ್ಲಿ ಮತ್ಸರವಿಲ್ಲ. ಆತನು ಶೈವರ ದ್ವೇಷಮಾಡುತ್ತಿರುವಂತೆ ನಾನು ಶ್ರೀವೈಷ್ಣವರ ದ್ವೇಷಮಾಡುವದಿಲ್ಲ. ವೈಷ್ಣವ

ಸಿದ್ಧಾಂತಗಳಲ್ಲಿ ತಪ್ಪುಗಳನ್ನು ಹೇಳಬಲ್ಲೆನು. ಆದರೆ ದ್ವೇಷವು ನಮಗೆ ಸಲ್ಲತಕ್ಕದ್ದಲ್ಲ. ತಾತಾಚಾರ್ಯನು ರಾಜಮನ್ನಣೆ ಹೊಂದಿದರೆ ನನ್ನದೇನು ಹೋಗುವದು? ಆದರೆ ಆತನಿಂದ ಶೈವರಿಗೆ ತೊಂದರೆಯಾಗದಂತೆ ಮಾತ್ರ ನೋಡಿಕೊಳ್ಳುವದು ನಮ್ಮ ಕರ್ತವ್ಯವಾಗಿರುವದು. ಎಂದು ಮನಸ್ಸಿನಲ್ಲಿಯೋಚಿಸಿ ಪ್ರಕಾಶವಾಗಿ ರಾಜನನ್ನು ಕುರಿತು —ತಾತಾಚಾರ್ಯರನ್ನು ವಿಜಯನಗರದಿಂದ ಹೊರಗೆ ಹಾಕಬೇಕೆಂಬ ನನ್ನ ಇಚ್ಛೆ ಇರುವದಿಲ್ಲ. ಅವರ ಗುರುತ್ವವನ್ನು ನೀವು ಕಾಯಬಹುದು. ಆದರೆ ಅದರಿಂದ ಇತರ ಮತಗ ಪಂಡಿತರಿಗೆ ತೊಂದರೆಯಾಗಬಾರದು. ಶೈವರ ನಿಂದೆಯನ್ನು ಅವರು ಮಾಡಬಾರದು. ಶೈವಸಿದ್ಧಾಂತಗಳ ತಿರಸ್ಕರಣಕ್ಕೆ ಮನಸ್ಸು ಮಾಡಬಾರದು. ಹಾಗು ಸ್ಮಾರ್ತದ್ವೇಷ ಮಾಡಬಾರದು. ವೈಷ್ಣವ ಪಂಡಿತರಿಗೆ ನಿಮ್ಮ ಆ ಸ್ಥಾನದಲ್ಲಿ ಯಾವ ಮರ್ಯಾದೆಯು ದೊರೆಯುತ್ತದೆಯೋ ಆ ಮರ್ಯಾದೆಯು ಸ್ಮಾರ್ತ ಪಂಡಿತರಿಗೂ ದೊರೆಯಬೇಕು. ನಿಮ್ಮ ಪೂರ್ವಜರು ಸ್ಮಾರ್ತ ಪಂಡಿತರನ್ನು ಹ್ಯಾಗೆ ಗೌರವದಿಂದ ಕಾಣುತ್ತಿದ್ದರೋ ಅದರಂತೆ ನೀವೂ ಕಾಣಬೇಕು. ಸ್ಮಾರ್ತರ ಇನಾಮು ಹೊಲಗಳು-ವರ್ಷಾಶನಗಳು ಅವರವರಿಗೆ ನಡೆಯುವಂತೆ ಏರ್ಪಾಡು ಮಾಡಬೇಕು. ಇದಕ್ಕೆ ನೀವೂ ತಾತಾಚಾರ್ಯರೂ ಒಪ್ಪುತ್ತಿದ್ದರೆ ನಿಮ್ಮ ಪ್ರಾರ್ಥನೆಗೆ ಅನುಜ್ಞೆ ಕೊಡುವೆವು. ಎಂದು ನುಡಿದರು. ಕೃಷ್ಣದೇವರಾಯನು ಪಶ್ಚಾತ್ತಾಪದಿಂದ ತನ್ನ ತಪ್ಪನ್ನು ಒಪ್ಪಿಕೊಂಡು ಮುಂದೆ ಈರೀತಿ ಅನ್ಯಾಯವಾಗದಂತೆ ಜಾಗರೂಕನಾಗಿರುವೆನೆಂದು ಹೇಳಿದನು. ತಾತಾಚಾರ್ಯರು ರಾಜಮರ್ಯಾದೆ ಹೊಂದುವ ಅಭಿಲಾಷೆಯಿಂದ ಅದಕ್ಕೆಲ್ಲ ಸಮ್ಮತಿಸಿದರು.

---

## [೮]

ಅಪ್ಪಯ್ಯ ದೀಕ್ಷಿತರವರ ಕೀರ್ತಿಯು ದಿಗಂತವಾಗಿ ಹಬ್ಬಿತು. ರಾಯರು ದೀಕ್ಷಿತರನ್ನು ಬಿಟ್ಟು ಕ್ಷಣಕಾಲ ಸಹ ಇರದಾದರು. ದೀಕ್ಷಿತರ ವರ್ಚಸ್ಸು ಬೆಳೆಯಹತ್ತಿದ್ದರಿಂದ ತಾತಾಚಾರ್ಯರಿಗೆ ಮತ್ಸರವು ಹೆಚ್ಚತೊಡಗಿತು. ರಾಜರು ದೀಕ್ಷಿತರನ್ನು ಕೇಳದೆ ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಆದರೂ ದೀಕ್ಷಿತರು ತಾತಾಚಾರ್ಯರಿಗೆ ಯಾವಬಗೆಯ ಅಗೌರವವನ್ನೂ ಉಂಟುಮಾಡಲಿಲ್ಲ. ಆಚಾರ್ಯರು ದೀಕ್ಷಿತರ ಈ ದೊಡ್ಡಗುಣವನ್ನು

ಹೊಗಳಬೇಕಾಗಿತ್ತು. ಅದೂ ಆಗದಿದ್ದರೆ ಸುಮ್ಮನಾದರೂ ಇರಬೇಕಾಗಿತ್ತು. ಆದರೆ ಅವರ ಮನೋರಾಜ್ಯವು ವ್ಯರ್ಥವಾಗುವ ಸಮಯ ಬಂದದ್ದರಿಂದ ಅವರಿಗೆ ಸ್ವಲ್ಪ ಮಾತ್ರಕ್ಕಾದರೂ ಸಮಾಧಾನವಿರದೆ ಹೋಯಿತು. ವಿಶಿಷ್ಟಾದ್ವೈತ ಮತ ಪ್ರಸಾರಗೊಳಿಸಿ ತಾನು ಪ್ರಸಿದ್ಧ ಪುರುಷನಾಗಬೇಕೆಂದು ಹವಣಿಸುತ್ತಿದ್ದ ಅವರು ಆ ಹವಣಿಕೆಗೆ ಭಂಗವುಂಟಾದ್ದರಿಂದ ಬೆಂಕಿಯಲ್ಲಿ ಬಿದ್ದ ಉರುಗನಂತೆ ಚಡಪಡಿಸಿದ್ದು ಸ್ವಾಭಾವಿಕವೇ ಸರಿ! ಆಚಾರ್ಯರ ಈ ತಳಮಳವು ನಿತ್ಯವ್ಯವಹಾರವಾಯಿತು. ದೀಕ್ಷಿತರಿಗೂ ತಿಳಿಯದಂತೆ ಕೆಲಸವಾಯಿತು. ಇನ್ನು ಊರಿಗೆ ಹೋಗಬೇಕೆಂದು ಒಂದು ದಿನ ರಾಯರನ್ನು ಅಪ್ಪಣೆ ಕೇಳಿದರು. ರಾಯರು ದೀಕ್ಷಿತರ ವಿಯೋಗವನ್ನು ಸಹಿಸಲಾರದೆ—ಸ್ವಾಮಿನ್, ತಾವು ಸಂಸ್ಥಾನವಿರುವವರೆಗೂ ಇಲ್ಲಿಯೇ ಇರಬೇಕು. ನಾನು ಕಾರಣಾಂತರದಿಂದ ಎಲ್ಲಿಗಾದರೂ ಹೋದರೆ ನನ್ನ ಜೊತೆಯಲ್ಲಿಯೇ ಇರಬೇಕು. ನನ್ನ ಮೇಲೆ ಇಷ್ಟು ಕೃಪೆಮಾಡಬೇಕು. ನಿತ್ಯದಲ್ಲೂ ನಿಮ್ಮ ಸನ್ನಿಧಿಯಲ್ಲಿಯೇ ಇರಬೇಕೆಂದು ನನ್ನ ಮನಸ್ಸು ತವಕಿಸುತ್ತದೆ. ಎಂದು ಬಿನ್ನವಿಸಿಕೊಂಡನು. ದೀಕ್ಷಿತರವರಿಗೆ ನಿರುಪಾಯವಾಯಿತು. ರಾಜನ ಸಂತೋಷಾರ್ಥವಾಗಿ ಅವರು ರಾಜಧಾನಿಯಲ್ಲಿಯೇ ಇರಬೇಕಾಯಿತು.

ಆಚಾರ್ಯರಿಗೆ ಈ ಸಂಗತಿಯ ಶ್ರವಣದಿಂದ ಹೆಚ್ಚಾಗಿ ಉರಿಬಿದ್ದಿತು. ರಾಯರ ಮನಸ್ಸಿನಲ್ಲಿ ದೀಕ್ಷಿತರ ವಿಷಯವಾಗಿ ತಿರಸ್ಕಾರವುಂಟಾಗುವಂತೆ ಮಾಡಬೇಕೆಂದು ಯೋಚಿಸಿದರು. ಸಮಯ ನೋಡಿ ರಾಯರೆದುರಿಗೆ ದೀಕ್ಷಿತರ ಟೀಕೆಯನ್ನು ಮಾಡತೊಡಗಿದರು. ನಾನಾ ಕಾಲ್ಪನಿಕ ದೋಷಾರೋಪಣೆಗಳನ್ನು ದೀಕ್ಷಿತರ ಮೇಲೆ ಹೊರಿಸಿ ರಾಯರ ಮುಂದೆ ಹೇಳತೊಡಗಿದರು. ಆದರೆ ರಾಯರು ಇದರಿಂದ ಆಚಾರ್ಯರವರ ಕ್ಷುದ್ರತನವನ್ನು ಕಂಡುಕೊಂಡರಲ್ಲದೆ ದೀಕ್ಷಿತರ ವಿಷಯವಾಗಿ ಕಲುಷಿತ ಮನಸ್ಕರಾಗಲಿಲ್ಲ.

ಹೀಗಿರಲು ಒಂದುದಿನ ಚೀನಾದೇಶದಿಂದ ರಾಯರಿಗೆ ಎರಡು ಮಹಾವಸ್ತ್ರಗಳು ಕಾಣಿಕೆಯಾಗಿ ಬಂದವು. ಆ ವಸ್ತ್ರಗಳಲ್ಲಿ ಪ್ರತಿಯೊಂದು ಸಾವಿರಾರು ರೂಪಾಯಿ ಬೆಲೆ ಬಾಳುತ್ತಿದ್ದವು. ಆ ವಸ್ತ್ರಗಳನ್ನು ನೋಡಿ ರಾಯರ ಮನಸ್ಸಿನಲ್ಲಿ ಇಂಥ ಅಪೂರ್ವವಸ್ತ್ರಗಳನ್ನು ನಾನು ಧರಿಸುವದಕ್ಕಿಂತ ನನಗೆ ಪೂಜ್ಯರಾದ ದೀಕ್ಷಿತರಿಗೂ-ಆಚಾರ್ಯರಿಗೂ ಸಮರ್ಪಿಸುವದು ಉಚಿತವೆಂದು ಯೋಚಿಸಿ ಆಚಾರ್ಯರ ಮುಂದೆ ಆಡಿತೋರಿಸಿದರು. ಆದರೆ ಆಚಾರ್ಯರು ಅದನ್ನು ಸಹಿ

ಸದೆ—ರಾಜನೇ, ಇಂಥ ಶ್ರೇಷ್ಠವಸ್ತ್ರವನ್ನು ದೀಕ್ಷಿತರಿಗೆ ಕೊಡುವದರಿಂದ ಏನೂ ಪ್ರಯೋಜನವಿಲ್ಲ. ಸೀತಾದೇವಿಯು ಮಾರುತಿಗೆ ರತ್ನಹಾರವನ್ನು ಕೊಟ್ಟಂತೆಯೇ ಸರಿ! ಅವರು ನೀನು ಕೊಟ್ಟ ವಸ್ತ್ರದ ಪ್ರಯೋಜನವನ್ನು ಮಾಡಿಕೊಳ್ಳಲಾರರು. ಇಂದೇ ಸಂಜೆಗೆ ಅವರು ಈ ಮಹಾವಸ್ತ್ರವನ್ನು ಯಜ್ಞೇಶ್ವರನಿಗೆ ಅರ್ಪಿಸಿ ತಣ್ಣಗೆ ಕೂಡ್ರತಕ್ಕವರು, ಎಂದು ನುಡಿದರು. ರಾಜನಿಗೆ ಆಚಾರ್ಯರ ಈ ಮಾತು ಸರಿಬರಲಿಲ್ಲ. ಅವನು ದೀಕ್ಷಿತರನ್ನು ಕರೆಯಿಸಿ ಅರ್ಘ್ಯ-ಪಾದ್ಯಾದಿಗಳಿಂದ ಪೂಜಿಸಿ ಆ ಮಹಾವಸ್ತ್ರವನ್ನು ಸಮರ್ಪಿಸಿದನು. ಮತ್ತು ಇನ್ನೊಂದನ್ನು ಆಚಾರ್ಯರಿಗೆ ಸಮರ್ಪಿಸಿ ಕೃತಕೃತ್ಯನಾದನು.

ಆಚಾರ್ಯರ ಮುನೀಷದಂತೆ ದೀಕ್ಷಿತರು ಆ ಮಹಾವಸ್ತ್ರವನ್ನು ತುಪ್ಪದಲ್ಲದ್ದಿ ಆ ದಿನ ಯಜ್ಞೇಶ್ವರನಿಗೆ ಸಮರ್ಪಿಸಿ ಬಿಟ್ಟರು. ಈ ಸಂಗತಿಯನ್ನು ಚರರ ಮುಖಾಂತರ ತಿಳಿದು ಆಚಾರ್ಯರು ಕೂಡಲೆ ರಾಯರ ಬಳಿಗೆ ಬಂದು ನಡೆದ ಸಂಗತಿಯನ್ನು ಹೇಳಿ ಬಿಟ್ಟರು. ಆದರೂ ರಾಯರು ಅದನ್ನು ನಂಬಲಿಲ್ಲ. ಮರುದಿನ ಸ್ನಾನತೀರ್ಥದ ವೇಳೆಗೆ ಆಚಾರ್ಯರು ಆ ಮಹಾವಸ್ತ್ರವನ್ನುಟ್ಟುಕೊಂಡು ಅರಮನೆಗೆ ಬಂದರು. ದೀಕ್ಷಿತರವರು ಹಾಗೆಯೇ ಬಂದರು. ರಾಜನಿಗೆ ಸಂಶಯ ಬಂದಿತು. ಆಗ ಆತನು—ಸ್ವಾಮಿನ್ ನಿನ್ನೆ ಕೊಟ್ಟ ಮಹಾವಸ್ತ್ರವನ್ನು ತಾವು ಯಾಕೆ ಈ ದಿನ ಉಟ್ಟುಕೊಳ್ಳಲಿಲ್ಲ? ಎಂದು ಕೇಳಿದರು. ಕೂಡಲೆ ದೀಕ್ಷಿತರು—ರಾಜನೇ, ಯಾರು ಧಾರಣ ಮಾಡಿದರೆ ಶಾಶ್ವತಬ್ರಹ್ಮಕಲ್ಪವಾಗಿ ಫಲವು ದೊರೆಯುವದೋ ಅವರು ಅದನ್ನು ಧರಿಸಿರುತ್ತಾರೆ. ಅದರಿಂದ ನಿಮಗೂ ನಿಮ್ಮ ಸಂಸ್ಥಾನಕ್ಕೂ ಸಕಲ ಶ್ರೇಯಸ್ಸುಗಳುಂಟಾಗುವವು. ನಮ್ಮ ನಶ್ವರದೇಹಕ್ಕೆ ಆ ಮಹಾವಸ್ತ್ರವನ್ನು ಉಟ್ಟರೆ ನನಗೆ ಶಾಶ್ವತಸುಖವುಂಟಾಗಲಾರದು ಎಂದರು. ಆಚಾರ್ಯರು ಹತ್ತಿರದಲ್ಲಿಯೇ ಕುಳಿತುಕೊಂಡಿದ್ದರು. ಇದೇ ಸಂಧಿಯಲ್ಲಿಯೇ ದೀಕ್ಷಿತರವರ ಫಜೀತಿ ಮಾಡಬೇಕೆಂದು ಮುಂದರಿದು ಬಂದು—ದೀಕ್ಷಿತರೇ, ಬರಿಯ ಬಾಯಿಮಾತಿನಿಂದ ಪ್ರಯೋಜನವಿಲ್ಲ. ನೀವು ಹೇಳುವ ಅಂಶವನ್ನು ರಾಜನ ನಿದರ್ಶನಕ್ಕೆ ತಂದುಕೊಡಬೇಕು. ಅಪರಾಧವನ್ನು ಬಚ್ಚಿಡುವದಕ್ಕಾಗಿ ಇಂಥ ದೊಡ್ಡ ಮಾತುಗಳನ್ನಾಡಿದರೆ ರಾಜನು ಒಡಂಬಡಲಾರನು. ಎಂದು ನುಡಿದು ದೀಕ್ಷಿತರ ಉತ್ತರದ ದಾರಿಯನ್ನು ನೋಡಲಾರಂಭಿಸಿದರು. ದೀಕ್ಷಿತರು ಮತ್ತೆ ಇಂಥ ಮಾತುಗಳನ್ನಾಡಿದರೆ ಕೂಡಲೆ ಆ ಮಹಾವಸ್ತ್ರವನ್ನು ಅಗ್ನಿಯಲ್ಲಿ ಹೋಮಮಾಡಿದ ಸಂಗತಿಯನ್ನು

ಸಿದ್ಧಪಡಿಸಬೇಕೆಂದು ಆಚಾರ್ಯರು ಅತ್ಯಾತುರರಾಗಿದ್ದರು. ದೀಕ್ಷಿತರು ದೈವೀಸಾಮರ್ಥ್ಯವುಳ್ಳವರು. ಆಚಾರ್ಯರ ಮಾನುಷಬುದ್ಧಿಗೆ ಸೊಪ್ಪು ಹಾಕುವರೇ! ಅವರು ರಾಜನನ್ನು ಕರೆದು—ನಿನ್ನೆಯದಿನ ಶ್ರೀಚಿದಂಬರಕ್ಷೇತ್ರದಲ್ಲಿ ಕನಕಸಭಾಪತಿಯ ಉತ್ಸವವು ಹೇಗೆ ನಡೆಯಿತೆಂಬದನ್ನು ಅಲ್ಲಿಯ ಅಧಿಕಾರಿಗಳಿಗೆ ಬರೆದು ಉತ್ತರ ತರಿಸಿರಿ. ಎಂದು ನುಡಿದು ಸುಮ್ಮನಾದರು. ಚಿದಂಬರಕ್ಷೇತ್ರದ ಅಧಿಕಾರಿಗಳಿಂದ ಉತ್ತರ ಬರುವವರೆಗೆ ಆಚಾರ್ಯರಿಗೆ ಮಾತಾಡಲಿಕ್ಕೆ ಮಾರ್ಗವಿಲ್ಲದಾಯಿತು. ರಾಯರು ಆ ಕೂಡಲೆ ಚಿದಂಬರಕ್ಷೇತ್ರಕ್ಕೆ ಹೇಜೇಬನನ್ನು ಕಳಿಸಿದರು. ಅವನು ಶೀಘ್ರಗತಿಯಿಂದ ಪ್ರಯಾಣ ಬೆಳಿಸಿ ಅಲ್ಲಿಯ ಅಧಿಕಾರಿಗಳು ಬರೆದು ಕೊಟ್ಟದ್ದನ್ನು ರಾಯರಿಗೆ ತಂದೊಪ್ಪಿಸಿದನು. ಆ ಅಧಿಕಾರಿಗಳು ಬರೆದ ಪತ್ರದಲ್ಲಿ "ಆ ದಿವಸ ಶ್ರೀ ಅಪ್ಪಯ್ಯದೀಕ್ಷಿತರವರು ದಯಮಾಡಿಸಿ ಸ್ವಾಮಿಗೆ ಷೋಡಶೋಪಚಾರಗಳಿಂದ ಪೂಜಿಸಿ ಒಂದು ದಿವ್ಯವಾದ ವಸ್ತ್ರವನ್ನು ಕನಕಸಭಾಪತಿಗೆ ಉಡಿಸಿ ಕೃಷ್ಣದೇವರಾಯರಿಗೆ ಸಕಲಶ್ರೇಯಸ್ಸುಗಳು ಒದಗುವಂತೆ ಅನುಗ್ರಹಿಸುವ ಹಾಗೆ ಸ್ವಾಮಿಯನ್ನು ಪ್ರಾರ್ಥಿಸಿ ಕೂಡಲೆ ಕಣ್ಮರೆಯಾದರು." ಎಂಬ ಸಂಗತಿಯು ವಿಶದವಾಗಿತ್ತು. ರಾಜನು ಆಶ್ಚರ್ಯಭರಿತನಾದನು. ದೀಕ್ಷಿತರು ಮನುಷ್ಯಮಾತ್ರರಲ್ಲನೆಂದು ನಿರ್ಧರಿಸಿದನು. ಆ ಮಿತಿಮೊದಲ್ಗೊಂಡು ರಾಜನು ದೀಕ್ಷಿತರವರ ಮೇಲೆ ಅತ್ಯಂತ ಭಕ್ತಿಯನ್ನು ಮಾಡತೊಡಗಿದನು. ತಾತಾಚಾರ್ಯರು ಏನು ಹೇಳಿದರೂ ಅದರಿಂದ ಪ್ರಯೋಜನವಾಗದೆ ದೀಕ್ಷಿತರವರ ಮೇಲಿನ ಭಕ್ತಿಯು ಇಮ್ಮಡಿಸತೊಡಗಿತು. ರಾಜನ ಈ ಭಕ್ತಿಯನ್ನು ನೋಡಿ ಆಚಾರ್ಯರು ಹತಾಶರಾದರು.

---

## [ ೯ ]

ರಾಗದ್ವೇಷಾದಿಗಳು ಮನುಷ್ಯಪ್ರಾಣಿಯ ಬೆನ್ನ ಬಿಡಲಾರವು. ಎಷ್ಟು ಜನರು ಮನುಷ್ಯಕೋಟಿಯಲ್ಲಿರುವರೋ ಅವರೆಲ್ಲರಿಗೆ ಷಡ್ವಿಕಾರಗಳು ಇದ್ದೇ ತೀರುವವು. ಆದರೆ ಯಾರು ಮನುಷ್ಯಕೋಟಿಯನ್ನು ಮೀರಿರುವರೋ ಅವರಿಗೆ ರಾಗದ್ವೇಷಾದಿಗಳು ಬಾಧಿಸಲಾರವು. ಮನುಷ್ಯನು ಪ್ರಯತ್ನದಿಂದ ಪ್ರತ್ಯಕ್ಷ ದೇವಗುರುವಿನಷ್ಟು ವಿದ್ಯೆಸಂಪಾದಿಸಬಹುದು ವಾದದಲ್ಲಿ ಸಕಲಪಂಡಿತರನ್ನು ಜಯಿಸಿ ಹಗಲು ದೀವಟಿಗೆಯನ್ನು ಹಿಡಿಸಬಹುದು ಹಾಗು ವಿಜಯ ಪತಾಕೆ

ಯನ್ನು ಮೊರಿಸಬಹುದು ಆದರೆ ತಮ್ಮ ದೇಹದಲ್ಲಿರುವ ಷಡ್ವಿಕಾರಗಳನ್ನು ಗೆದೆಯುವದು ಬಹು ಕಷ್ಟವು. ಈ ಷಡ್ವಿಕಾರಗಳನ್ನು ಜಯಿಸಿದವನು ತ್ರಿಭುವನವನ್ನಾದರೂ ಜಯಿಸುವನು. ಈ ಷಡ್ರಿಪುಗಳನ್ನು ಜಯಿಸಿದಾಗಲೇ ಅವನು ಮನುಷ್ಯಕೋಟಿಯನ್ನು ಮೀರುವನು.

ಅಪ್ಪಯ್ಯದೀಕ್ಷಿತರು ತೋರಿಕೆಯಲ್ಲಿ ಮನುಷ್ಯರಂತೆ ಕಂಡರೂ ಅವರು ಮನುಷ್ಯರಾಗಿರಲಿಲ್ಲ. ಅವರು ಅಮಾನುಷರಾಗಿದ್ದರು. ಅವರಿಗೆ ಷಡ್ವಿಕಾರಗಳ ಬಾಧೆಯು ಇರಲಿಲ್ಲ. ಸರ್ವದಾ ಶಾಂತರೂ, ಪ್ರಸನ್ನಚಿತ್ತರೂ, ಆಗಿರುತ್ತಿದ್ದರು. ಅವರ ವಿಜ್ಞಾನವನ್ನೂ, ತಪಸ್ಸಾಮರ್ಥ್ಯವನ್ನೂ ತಿಳಿದು ರಾಜನು ಯಾವಾಗಲೂ ಅವರ ವಿಷಯದಲ್ಲಿ ಶುದ್ಧಪ್ರೇಮದಿಂದ ವರ್ತಿಸುತ್ತಿದ್ದನು. ಹೀಗಿರಲು ಒಂದು ದಿನ ಕೃಷ್ಣದೇವರಾಜನ ಮನಸ್ಸಿನಲ್ಲಿ ದಕ್ಷಿಣದೇಶಕ್ಕೆ ಯಾತ್ರಾರ್ಥವಾಗಿ ಹೊರಡಬೇಕೆಂಬ ವಿಚಾರಬಂದಿತು. ಅದನ್ನು ದೀಕ್ಷಿತರಿಗೆ ತಿಳಿಸಲು ಅವರು ಅವಶ್ಯವಾಗಿ ಆಗಬಹುದೆಂದು ಅಪ್ಪಣೆಯನ್ನಿತ್ತರು. ರಾಜನು ಸಕಲ ಸರಂಜಾಮುದೊಡನೆ ಯಾತ್ರಾರ್ಥವಾಗಿ ಹೊರಟನು. ರಾಜನು ದಾರಿಯಲ್ಲಿ ಹತ್ತುವ ಪ್ರಸಿದ್ಧ ಕ್ಷೇತ್ರಗಳನ್ನು ನೋಡುತ್ತ ಶ್ರೀರಂಗಕ್ಷೇತ್ರಕ್ಕೆ ಬಂದನು.

ಶ್ರೀರಂಗವು ಪರಮಪವಿತ್ರವಾದ ಕ್ಷೇತ್ರವು, ಈ ಕ್ಷೇತ್ರದ ಅಧಿದೈವತವು ರಂಗನಾಥನು. ಶೇಷಶಾಯಿಯಾದ ವಿಷ್ಣುವಿನ ಶಿಲಾಮಯ ಉದ್ದಂಡಮೂರ್ತಿಯು ಭಕ್ತರಿಗೆ ಆನಂದಕರವಾಗಿ ಇಲ್ಲಿ ನೆಲೆಸಿರುವದು. ರಾಯರು ಚತುರಂಗ ಬಲಸಮೇತರಾಗಿ ಶ್ರೀರಂಗದ ಹೊರಭಾಗದಲ್ಲಿ ವಸತಿಯನ್ನು ಮಾಡಿದರು. ಜಗತ್ಕಾರಣನಾದ ಪರಮೇಶ್ವರನು ಒಬ್ಬನೇ ಇದ್ದದರಿಂದ ಆತನನ್ನು ಶಿವನೆಂದು ಕರೆದರೂ ಅಷ್ಟೆ; ವಿಷ್ಣುವೆಂದು ಕರೆದರೂ ಅಷ್ಟೆ; ಎಂದು ಅದ್ವೈತಿಗಳು ತಿಳಿಯುವರಾದ್ದರಿಂದ ಅಪ್ಪಯ್ಯದೀಕ್ಷಿತರಿಗೆ ಆ ವಿಷ್ಣು ಕ್ಷೇತ್ರದ ದರ್ಶನದಿಂದ ಪರಮಾನಂದವಾಯಿತು. ಆದರೆ ಶಿವನು ಬೇರೆ ವಿಷ್ಣುವು ಬೇರೆಯೆಂದು ತಿಳಿಯುವ ತಾತಾಚಾರ್ಯರಿಗೆ ದೀಕ್ಷಿತರಿಗಾದ ಈ ಆನಂದವು ಸಹನವಾಗಲಿಲ್ಲ. ಈ ಕ್ಷೇತ್ರದಲ್ಲಿರುವಾಗ ದೀಕ್ಷಿತರಿಗೂ-ರಾಜನಿಗೂ ವಿರಸವಾಗುವಂಥ ಪ್ರಸಂಗವನ್ನುಂಟುಮಾಡಬೇಕೆಂದು ಎಣಿಕೆಹಾಕಲಾರಂಭಿಸಿದರು.

ಅಪ್ಪಯ್ಯದೀಕ್ಷಿತರಲ್ಲಿ ಒಂದು ನಿಯಮವಿತ್ತು. ಪ್ರತಿನಿತ್ಯ ಶಿವದರ್ಶನವಿಲ್ಲದೆ ಅವರು ಜಲಪ್ರಾಶನಕೂಡಾ ಮಾಡುತ್ತಿರಲಿಲ್ಲ. ಈ ಗುಟ್ಟನ್ನು ತಾತಾಚಾರ್ಯರವರು ಕಂಡುಹಿಡಿದಿದ್ದರು. ದೀಕ್ಷಿತರ ಈ ನಿಯಮವನ್ನೇ ಅವರಿಗೆ

ಮುಳುವು ಮಾಡಬೇಕೆಂದೆಣಿಸಿ ಆಚಾರ್ಯರು ರಾಯನ ಒಳಗೆ ಹೋಗಿ—ಪ್ರಭುಗಳೇ, ಈ ದಿನ ದೀಕ್ಷಿತರ ಪರೀಕ್ಷೆಯ ಕಾಲವಿರುವದು; ನೀವಂತೂ ಅವರನ್ನು ಪ್ರತ್ಯಕ್ಷ ಪರಮೇಶ್ವರನೇ ಎಂದು ತಿಳಿದುಬಿಟ್ಟಿರುತ್ತೀರಿ. ತಿಳಿದುಕೊಳ್ಳಲೊಲ್ಲಿರೇಕೆ! ಇದಕ್ಕೆ ನಾನು ಬೇಡವೆನ್ನುವದಿಲ್ಲ. ಯಾವದೊಂದು ಸಂಗತಿಯನ್ನು ವಿಚಾರಾಂತ್ಯದಲ್ಲಿ ನಂಬಬೇಕಲ್ಲದೆ ಅಂಧಶ್ರದ್ಧೆಯಿಂದ ನಂಬಬಾರದು. ಇಷ್ಟೇ ನನ್ನ ವಿನಂತಿಯು. ಈ ದಿನ ದೀಕ್ಷಿತರು ಅನಾಯಾಸವಾಗಿ ಈ ವೈಷ್ಣವ ಕ್ಷೇತ್ರಕ್ಕೆ ಬಂದಿರುವರು. ಇಲ್ಲಿ ಶಿವನ ಹೆಸರು ಕೂಡಾ ಹುಡುಕಿದರೆ ಸಿಗುವಂತಿಲ್ಲ. ಅದ್ವೈತಿಗಳು ಶಿವನೂ-ವಿಷ್ಣುವೂ ಒಂದೇ ಎಂದು ತಿಳಿಯುತ್ತಾರಲ್ಲವೇ? ದೀಕ್ಷಿತರು ದಿನಾಲು ಶಿವದರ್ಶನವಿಲ್ಲದೆ ಜಲಪ್ರಾಶನಮಾಡುವದಿಲ್ಲ. ಈ ವಿಷ್ಣುಕ್ಷೇತ್ರದಲ್ಲಿ ಶಿವನಿಲ್ಲವೆಂದು ಅವರು ಈ ದಿನ ಬೇರೆ ಶಿವಕ್ಷೇತ್ರಕ್ಕೆ ಹೋಗಬೇಕೆಂದು ಮಾಡಿದ್ದಾರೆ. ಇದಕ್ಕೋಸ್ಕರ ಈಗಲೇ ಅವರು ನಿಮ್ಮ ಬಳಿಗೆ ಅಪ್ಪಣೆ ಕೇಳಲು ಬರುವರು. ಅವರಿಗೆ ನೀವು ಅಪ್ಪಣೆ ಕೊಡಬಾರದು. "ನಿಮ್ಮನ್ನಗಲಿ ಗಳಿಗೆ ಕೂಡಾ ಇರಲಾರೆನೆಂದು ಹೇಳಿರಿ. ನಿಮ್ಮ ಮಾತು ಮೀರಿ ಅವರು ಶಿವಕ್ಷೇತ್ರಕ್ಕೆ ಹೋದರೆ ಹರಿ-ಹರರಲ್ಲಿ ಭೇದವಿಲ್ಲೆಂದು ಅನ್ನುವದು ಕೇವಲ ಡಾಂಭಿಕವೆಂದು ಸಿದ್ಧವಾಗುವದು. ಒಂದುವೇಳೆ ನಿಮ್ಮ ಮಾತು ಕೇಳಿ ಶಿವದರ್ಶನವಿಲ್ಲದೆ ಅನ್ನಗ್ರಹಣಮಾಡಿದರೆ ನಿಯಮಬಿಟ್ಟು ನಡೆದ ತಪ್ಪಿಗೆ ಗುರಿಯಾಗುವರು. ಆಗ ಅವರು ಹರಿ-ಹರರು ಒಂದೇ ಎಂಬ ಮಾತನ್ನು ನಿದರ್ಶನಕ್ಕೆ ತಂದುಕೊಡಬೇಕಾಗುವದು. ಅವರು ಅಮಾನುಷರೆಂದು ನೀವು ತಿಳಿಯುತ್ತಿರುವಿರಾದ್ದರಿಂದ ಈ ಸಂಗತಿಯನ್ನು ಅವರು ನಿಮ್ಮ ನಿದರ್ಶನಕ್ಕೆ ಯಾಕೆ ತಂದುಕೊಡಬಾರದು? ಆದ್ದರಿಂದ ನಾನು ಹೇಳಿದಂತೆ ಮಾಡಿರಿ. ದೀಕ್ಷಿತರ ಸತ್ವಪರೀಕ್ಷೆಯಾಗಿಹೋಗುವದು" ಎಂದು ನುಡಿದರು.

ದೀಕ್ಷಿತರು ಸಾಮಾನ್ಯರಲ್ಲವೆಂಬುದು ರಾಯರಿಗೆ ಗೊತ್ತಾಗಿ ಹೋಗಿದ್ದರೂ ಮನುಷ್ಯಸ್ವಭಾವಾನುಗುಣವಾಗಿ ಪುನಃ ಪುನಃ ಭ್ರಾಂತಿಬಂದಿತು. ಆಚಾರ್ಯರ ಮಾತುಗಳು ಆತನಿಗೆ ಬಹು ರುಚಿಯಾಗಿ ಕಂಡವು. ಅವನು ಆಚಾರ್ಯರು ಹೇಳಿದಂತೆಯೇ ಮಾಡಬೇಕೆಂದು ನಿರ್ಧರಿಸುತ್ತಿರಲು ದೀಕ್ಷಿತರು ಅಲ್ಲಿಗೆ ಬಂದು—"ಈ ದಿನ ಕೃಷ್ಣಾಂಗಾರಕ ಚತುರ್ದಶಿ, ಈ ದಿನ ನನಗೆ ಹಗಲು ಊಟವಿಲ್ಲ. ಅನುಜ್ಞೆಯಾದರೆ ಯಾವದೊಂದು ಶಿವಕ್ಷೇತ್ರಕ್ಕೆ ಹೋಗಿ ದರ್ಶನ ಮಾಡಿಕೊಂಡು ರಾತ್ರೀ ಭೋಜನದ ವೇಳೆಗೆ ಇಲ್ಲಿಗೆ ಬರುವೆನು" ಎಂದು ಹೇಳಿ

ದರು. ರಾಜನು ಅದನ್ನು ಕೇಳಿ ಮೊದಲೇ ಗೊತ್ತುಮಾಡಿಸಿದ ಮೇರೆಗೆ—"ತಾವು ವಿಜಯಮಾಡಿಸಿದಲ್ಲಿ ಶಿವನೂ ಇರುತ್ತಾನೆ. ತನ್ನನ್ನು ನೋಡದೆ ನಾನು ಕ್ಷಣ ಕಾಲವೂ ಇರಲಾರೆನು" ಎಂದು ನುಡಿದನು. ಕೂಡಲೇ ದೀಕ್ಷಿತರು ಇದು ತಾತಾಚಾರ್ಯರ ತಂತ್ರವಿರಬಹುದೆಂದು ತರ್ಕಿಸಿ, ರಾಜನು ಹೀಗೆಂದಿಗೂ ನುಡಿಯಲಾರನು. ನಮ್ಮ ಪರೀಕ್ಷಾರ್ಥವಾಗಿ ತಾತಾಚಾರ್ಯರು ಹೇಳಿಕೊಟ್ಟಿರಬೇಕು. ಆಗಲಿ, ಆಚಾರ್ಯರಿಗೆ ತಕ್ಕ ಪ್ರಾಯಶ್ಚಿತ್ತ ಮಾಡಬೇಕು ಎಂದು ಮನಸ್ಸಿನಲ್ಲಿ ಅಂದುಕೊಂಡು ರಾಜನೇ ನಿನ್ನ ಇಷ್ಟದಂತೆಯೇ ಆಗಲಿ ಎಂದು ನುಡಿದರು.

ಆದಿನ ದೀಕ್ಷಿತರು ಸಂಜೆಯವರೆಗೆ ಮನೆ ಬಿಟ್ಟು ಎಲ್ಲಿಯೂ ಹೋಗಲಿಲ್ಲ. ತಮ್ಮ ತಂತ್ರವು ಫಲಿಸುವ ಸಮಯವು ಪ್ರಾಪ್ತವಾಗಿದೆಯೆಂದು ಆಚಾರ್ಯರು ಮನಸ್ಸಿನಲ್ಲಿಯೇ ಹಿಗ್ಗುತ್ತಿದ್ದರು. ಈ ದಿನ ರಾತ್ರಿ ರಂಗನಾಥೇಶ್ವರನಲ್ಲಿ ದೀಕ್ಷಿತರ ಮಾನಭಂಗ ಮಾಡಬೇಕೆಂದು ಹೊಂಚು ಹಾಕಿದರು. ರಾಜನ ಬಳಿಯಲ್ಲಿ ನಿಲ್ಲಲಿಕ್ಕೆ ಸಹ ದೀಕ್ಷಿತರಿಗೆ ಧೈರ್ಯವಾಗದಂತೆ ಮಾಡಬೇಕೆಂದೇ ಆಚಾರ್ಯರ ಮನೀಷೆಯಾಗಿತ್ತು. ದೀಕ್ಷಿತರು ಎಂದಿನಂತೆ ರಾಯರನ್ನೂ-ತಾತಾಚಾರ್ಯರನ್ನೂ ಸಂಗಡ ಕರೆದುಕೊಂಡು ರಂಗನಾಥನ ದೇವಾಲಯಕ್ಕೆ ಹೋದರು. ಮತ್ತು ಅಲ್ಲಿಯ ಪುಷ್ಕರಿಣಿಯಲ್ಲಿ ಸ್ನಾನ ಪ್ರಾತಃಕಾಲ ವಿಧಿಗಳನ್ನು ನೆರವೇರಿಸಿ ಶಿಷ್ಯಪರಿವಾರದೊಡನೆ ಮೂವರೂ ಒಳಗಣ ಪ್ರಾಕಾರವನ್ನು ಮೂರು ಬಾರಿ ಸುತ್ತಿ ಧ್ವಜಸ್ತಂಭದ ಬಳಿಯಲ್ಲಿ ನಿಂತರು. ಆಗ ದೀಕ್ಷಿತರು ಬದ್ಧಾಂಜಲಿಗಳಾಗಿ ಶಿವರೂಪಧ್ಯಾನಿಸಿ ಶಿವಸ್ವರೂಪವನ್ನು ಸ್ತುತಿಸುವ ಶ್ಲೋಕಗಳನ್ನುಚ್ಚರಿಸಿದರು. ಆ ಕೂಡಲೆ ಗರ್ಭಗುಡಿಯಲ್ಲಿ ವಿಚಿತ್ರಪ್ರಕಾಶವು ಪ್ರವರ್ತಿಸಿತು. ದೀಕ್ಷಿತರೂ ಆಚಾರ್ಯರೂ ರಾಯರೂ ನಿಂತನಿಂತಹಾಗೆ ರಂಗನಾಥನ ವಿಗ್ರಹವು ಲಿಂಗರೂಪವಾಯಿತು. ಆದಿಶೇಷನು ಪಾನಪಟ್ಟವಾದನು. ಮಿಕ್ಕ ವಿಗ್ರಹಗಳೆಲ್ಲವೂ ಶಿವಪರಿವಾರದಂತೆ ರೂಪತಾಳಿದವು. ಗರುಡನು ನಂದಿಯಾದನು.

ದೀಕ್ಷಿತರು ಕ್ಷಣಹೊತ್ತು ಧ್ವಜಸ್ತಂಭದ ಪಕ್ಕದ ನಿಂತಿದ್ದು ಆಚಾರ್ಯರನ್ನೂ ರಾಯರನ್ನೂ ಹಿಂದಿಟ್ಟುಕೊಂಡು ಗುಡಿಯನ್ನು ಪ್ರವೇಶಿಸಿದರು. ಒಳಗಿನ ಈ ವಿಚಿತ್ರ ಪ್ರಕಾರವನ್ನು ನೋಡಿ ರಾಯರು ಆಶ್ಚರ್ಯಾಭಿಭೂತರಾದರು. ಆಚಾರ್ಯರಂತೂ ಮುಂದುಗಾಣದೆ ನಿಂತುಕೊಂಡರು. ಶೇಷಶಾಯಿಯಾದ ರಂಗನಾಥನು ಶಿವಸ್ವರೂಪನಾಗಿದ್ದನು. ಆಗ ದೀಕ್ಷಿತರು ಪರಮೇಶ್ವರನಿಗೆ ಭಕ್ತಿಯಿಂದ ಪೊಡಮಟ್ಟು ರಾಜನನ್ನು ಕುರಿತು—ನಿಮ್ಮ ಮಾತು ಎಂದಿಗೂ ಸುಳ್ಳಲ್ಲ. ಶಿವನು ನಮಗೆ ಇಲ್ಲಿಯೇ ದರ್ಶನ ಕೊಟ್ಟನು. ಸ್ವಾಮಿಯ ದರ್ಶನವನ್ನು ಕಣ್ಣುತುಂಬಾ ಹೊಂದಿರಿ ಎಂದು ನುಡಿದು ಸ್ವಹಸ್ತದಿಂದಲೇ ಪ್ರಸಾದವನ್ನು ಕೊಟ್ಟರು, ದೀಕ್ಷಿತರ ಈ ಅದ್ಭುತ ಸಾಮರ್ಥ್ಯದಿಂದ ಆಚಾರ್ಯರು ತೆಪ್ಪಗಾದರು. ಎಲಾ! ನಾನು ದೀಕ್ಷಿತರ ವ್ರತಕ್ಕೆ ಭಂಗ ತಂದು ಅವರ ಮಾನಹಾನಿ ಮಾಡಬೇಕೆಂದು ಮಾಡಿರಲು ಇದೇನದ್ಭುತವಾಯಿತಲ್ಲ ನಾನೇ ಮಾನಗೇಡಾಗುವ ಹೊತ್ತು ಬಂದಿತು, ಎಂದು ಖಿನ್ನ ಮುಖಮುದ್ರೆಯುಳ್ಳವರಾಗಿ ಒತ್ತ

ಟ್ಟಿಗೆ ನಿಂತುಕೊಂಡರು. ದೀಕ್ಷಿತರು ಆಚಾರ್ಯರ ಸ್ಥಿತಿಯನ್ನು ನೋಡಿ ಅವರ ಮಾನಸಬುದ್ಧಿಗೆ ಕನಿಕರಪಟ್ಟು ಪರಿಹರಿಸಲೊಡನೆ ಪಾರ್ಶ್ವಕ್ಕೆ ಬಂದರು.

ಬಳಿಕ ತಾತಾಚಾರ್ಯರಿಗೆ ಬಹಳ ಚಿಂತೆಯುಂಟಾಯಿತು. ನಾನು ವಿಶಿಷ್ಟಾದ್ವೈತಮತ ಪ್ರಸಾರಮಾಡುವ ಹೊತ್ತಟ್ಟಿಗಿರಲಿ, ಬಹುಪುರಾತನಕಾಲದಿಂದ ವಿಷ್ಣುಕ್ಷೇತ್ರವೆಂದು ಪ್ರಸಿದ್ಧವಾದ ಈ ಕ್ಷೇತ್ರವನ್ನು ಶಿವಕ್ಷೇತ್ರವನ್ನಾಗಿ ಮಾಡುವದಕ್ಕೆ ಕಾರಣೀಭೂತನಾದೆನು. ನನ್ನ ಈ ಮೂರ್ಖತನಕ್ಕೆ ವೈಷ್ಣವರೆಲ್ಲರೂ ನನ್ನನ್ನು ಶಪಿಸದೆ ಇರಲಾರರು. ರಾಜನಿಗೆ ಹೇಳಿಕೊಂಡು ಈ ಕ್ಷೇತ್ರವನ್ನು ಮೊದಲಿನಂತೆ ಮಾಡಿಸಲು ಆತನನ್ನು ದೀಕ್ಷಿತರ ಬಳಿಗೆ ಕಳುಹಿಸಬೇಕು. ಎಂದು ಯೋಚಿಸಿ ರಾಯರ ಬಳಿಗೆ ಹೋಗಿ, ನಾನು ದೀಕ್ಷಿತರಿಗೆ ಮೋಸಮಾಡಬೇಕೆಂದರೆ ಅವರು ಸತ್ವಪ್ರಭಾವದಿಂದ ನನ್ನ ತಂತ್ರವನ್ನು ನನಗೇ ತಿರುಗಿಸಿದರು. ಅವರ ಮುಂದೆ ನಮ್ಮಂಥವರ ಆಟವು ನಡೆಯುವದಿಲ್ಲ. ಈ ಕ್ಷೇತ್ರವನ್ನು ಮೊದಲಿನಂತೆ ಮಾಡಲು, ನನಗೆ ಶಕ್ತಿಯಿಲ್ಲವು ತಾವು ದೀಕ್ಷಿತರ ಬಳಿಗೆಹೋಗಿ ಈ ದಿವ್ಯ ಕ್ಷೇತ್ರವನ್ನು ಪುನಃ ಮೊದಲಿನಂತೆ ಮಾಡಲು ವಿಜ್ಞಾಪಿಸಿ ಲೋಕೋತ್ತರ ಪುಣ್ಯವಹಿಯಿರಿ ಎಂದು ಅಂಗಲಾಚಿ ಬೇಡಿಕೊಂಡರು. ಆಗ ರಾಯರು ಕೆಲ ಜನ ಪ್ರತಿಷ್ಠಿತರನ್ನು ಸಂಗಡ ಕರೆದುಕೊಂಡು ದೀಕ್ಷಿತರ ಬಳಿಗೆ ಹೋಗಿ ಅವರ ಪಾದಗಳನ್ನು ಗಟ್ಟಿಯಾಗಿ ಹಿಡಿದು—"ಸ್ವಾಮಿನ್, ರಂಗನಾಥನ ಕ್ಷೇತ್ರವನ್ನು ಉದ್ಧರಿಸದಿದ್ದರೆ ಚರಣಗಳನ್ನು ಬಿಡಲಾರೆನು" ಎಂದು ವಿನಯದಿಂದ ಪ್ರಾರ್ಥಿಸಿದರು. ರಾಜನ ದೀನವಾಣಿಯನ್ನು ಕೇಳಿ ದೀಕ್ಷಿತರಿಗೆ ಕರುಣೆಹುಟ್ಟಿತು. ಅವರು—ತಾತಾಚಾರ್ಯರ ಮಾತಿಗೆ ಮರುಳಾಗಿ ಶಿವನು ಇಲ್ಲಿಯೇ ಇರುವನು ಎಂದೆಯಷ್ಟೇ; ನಿನ್ನಲ್ಲಿ ಭಗವದಂಶವಿರುವದರಿಂದ ನಿನ್ನ ಮಾತನ್ನು ಯಥಾರ್ಥಗೊಳಿಸಲು ರಂಗನಾಥನು ಶಿವರೂಪದಿಂದ ದರ್ಶನಕೊಟ್ಟನು. ಈಗ ನೀನು ಮನಸ್ಸಿನಲ್ಲಿ ರಂಗನಾಥನು ಮೊದಲಿನಂತೆ ಇರಬೇಕೆಂದು ಅಭಿಲಾಷೆ ತಾಳಿದ್ದರಿಂದ ಆತನು ಹಾಗೆಯೇ ಮಾಡುವನು ಚಿಂತೆ ಮಾಡಬೇಡ ಎಂದು ಅಭಯವನ್ನು ಕೊಟ್ಟರು. ಬಳಿಕ ದೀಕ್ಷಿತರು ರಂಗನಾಥನು ಮೊದಲು ಯಾವ ಪ್ರಕಾರ ಇದ್ದನೋ ಆ ಪ್ರಕಾರ ಧ್ಯಾನ ಮಾಡಲು ಗುಡಿಯಲ್ಲಿಯ ವಿಗ್ರಹವು ಮೊದಲಿನ ಸ್ವರೂಪವನ್ನು ಹೊಂದಿತು.

ಮರುದಿನ ರಾಜನು ರಂಗನಾಥಸ್ವಾಮಿಯ ಗುಡಿಗೆ ಹೋಗಿ ಬಾಗಿಲು ತೆಗೆಯಿಸಿ ನೋಡಲು ಪೂರ್ವದಂತೆ ರಂಗನಾಥನು ಶೇಷಶಾಯಿಯಾಗಿದ್ದನು. ರಾಜನಿಗೆ ಪರಮಾನಂದವಾಯಿತು. ಬಳಿಕ ಆತನು ಬಿಡಾರಕ್ಕೆ ಬಂದು ಮನಸ್ಸಿನಲ್ಲಿ ತಾತಾಚಾರ್ಯರು ಭೇದಬುದ್ಧಿಯವರು. ಅಪ್ಪಯ್ಯದೀಕ್ಷಿತರಂಥ ಶುದ್ಧಸತ್ವವು ಅವರಲ್ಲಿ ಬರಲಾರದು. ಇನ್ನು ಅವರನ್ನು ನನ್ನ ಸಂಸ್ಥಾನದಲ್ಲಿಟ್ಟುಕೊಂಡರೆ ನನಗೆ ಶ್ರೇಯಸ್ಸು ಉಂಟಾಗಲಾರದು. ಆದ್ದರಿಂದ ಅವರನ್ನು ಉಪಾಯಾಂತರಗಳಿಂದಾಗಲಿ, ಸ್ಪಷ್ಟೋಕ್ತಿಗಳಿಂದಾಗಲಿ ತಿರುಗಿ ಊರಿಗೆ ಕಳುಹಿಸುವದೇ ಉಚಿತವು. ಎಂದು ಯೋಚಿಸಿ ಹೀಗೆ ಮಾಡುವದೇ ಕ್ಷೇಮವೆಂದು ನಿಶ್ಚಯಿಸಿದನು.

[ ೧೦ ]

ನಿಶ್ಚಯದಂತೆ ರಾಜನು ಮರುದಿನ ತಾತಾಚಾರ್ಯರನ್ನು ರಹಸ್ಯವಾಗಿ ಕಂಡು— ಸ್ವಾಮಿಾ, ಇನ್ನುಮುಂದೆ ತಾವು ನಮ್ಮ ಆಸ್ಥಾನದಲ್ಲಿರಬಾರದು, ಯಾಕಂದರೆ ನಿಮ್ಮ ಸ್ವಭಾವವು ನನ್ನ ಮನಸ್ಸಿಗೆ ಬರುವದಿಲ್ಲ. ಶೈವರಲ್ಲಿ ನಿಮ್ಮ ದ್ವೇಷವು ಜನ್ಮಸಿದ್ಧವಾಗಿದ್ದಂತೆ ತೋರುತ್ತದೆ. ಇಂಥ ನೀವು ದೀಕ್ಷಿತರ ತಂದೆಯವರಬಳಿಯಲ್ಲಿ ಹ್ಯಾಗೆ ಅನ್ಯಾಯವನ್ನು ಮಾಡಿದಿರೋ ತಿಳಿಯೆನು. ನಾನು ಎಷ್ಟು ಪರಿಯಾಗಿ ಪ್ರಾರ್ಥಿಸಿದರೂ ನೀವು ದೀಕ್ಷಿತರ ಮೇಲಿನ ದ್ವೇಷಮಾಡುವದನ್ನು ಬಿಡಲಿಲ್ಲ. ನಿನ್ನೆಯದಿನ ನಿಮ್ಮ ಮಾತು ಕೇಳಿ ನಾನು ದೀಕ್ಷಿತರ ಸತ್ವಪರೀಕ್ಷೆ ಮಾಡಿದೆನು. ಆ ಮಹಾತ್ಮರು ಸತ್ಪುರುಷರೂ, ಸಜ್ಜನರೂ ಇದ್ದುದರಿಂದ ನಮ್ಮ ಪರೀಕ್ಷೆಯಲ್ಲಿ ಪಾರಾದದ್ದಲ್ಲದೆ ನಮಗೆ ಯಾವಬಗೆಯ ಶಾಪವನ್ನೂ ಕೊಡಲಿಲ್ಲ. ಮಹಾಪುರುಷರನ್ನು ಪರೀಕ್ಷಿಸಹೋಗುವದು ಮಹತ್ಪಾಪವು. ನೀವು ನನ್ನಬಳಿಯಲ್ಲಿ ಇದ್ದದ್ದೇ ಆದರೆ ಮುಂದೆ ಯಾವ ಯಾವ ಅನರ್ಥಗಳೊದಗುವವೋ ಅವನ್ನು ಊಹಿಸಲಾರೆನು. ಮತ್ಸರವು ಅತಿ ನೀಚವಾದದ್ದು. ಅದನ್ನು ಆಶ್ರಯಿಸಿದ ಮನುಷ್ಯರಿಂದ ಎಂಥ ಅನರ್ಥಗಳಾಗುವವೆಂಬುದನ್ನು ಹೇಳಲಿಕ್ಕಾಗುವದಿಲ್ಲ. ಆದ್ದರಿಂದ ಇನ್ನು ಮುಂದೆ ನೀವು ಕಾಂಚಿಯಲ್ಲಿ ಸ್ವಸ್ಥವಾಗಿ ಇರಬೇಕು. ನಿಮಗೆ ಯೋಗ್ಯ ವರಮಾನವನ್ನು ಗೊತ್ತುಪಡಿಸಿಕೊಡುತ್ತೇನೆ, ಎಂದು ನುಡಿದನು. ರಾಜನ ಮಾತುಗಳನ್ನು ಕೇಳಿ ಆಚಾರ್ಯರಿಗೆ ಸಿಡಿಲು ಬಡಿದಂತಾದರೂ, ಪ್ರತಿಮಾತನಾಡಲಿಲ್ಲ. ಇನ್ನು ರಾಜನಲ್ಲಿ ತಮ್ಮ ಆಟವು ನಡೆಯದೆಂಬುದು ಅವರ ಮನಸ್ಸಿಗೆ ನಂಬಿಗೆಯಾಯಿತು. ಮಾಡಿದ ಕೈಗೆ ಕೈಯೋ ಸಾಕ್ಷಿಯಲ್ಲವೇ? ಆಚಾರ್ಯರು ಮೌನದಿಂದ ಹೊರಟುಹೋದರು.

ಇತ್ತ ದೀಕ್ಷಿತರು ರಾಜನನ್ನು ಕುರಿತು— ರಾಜನೇ, ನಾವು ನಿನ್ನ ಬಳಿಯಲ್ಲಿರಹತ್ತಿ ಬಹಳ ದಿನಗಳಾದವು. ನಿನ್ನ ಮೇಲೆ ವಿರೂಪಾಕ್ಷೇಶ್ವರನ ಪೂರ್ಣಾನುಗ್ರಹವಿರುವದು. ನಾವು ಎಲ್ಲಿದ್ದರೂ ನಿನಗೂ ನಿನ್ನ ರಾಜ್ಯಕ್ಕೂ ಕ್ಷೇಮವಾಗಲೆಂದೇ ಪರಮೇಶ್ವರನನ್ನು ಪ್ರಾರ್ಥಿಸುತ್ತಿರುವೆವು. ನಾವು ನಿನ್ನಬಳಿಯಲ್ಲಿದ್ದರೂ ಅಷ್ಟೇ, ನಮ್ಮ ಅಗ್ರಹಾರದಲ್ಲಿದ್ದರೂ ಅಷ್ಟೇ; ಅಂದಬಳಿಕ ನಾವು ಆಸ್ಥಾನದಲ್ಲಿಯೇ ಇರಬೇಕೆಂದು ಆಗ್ರಹಪಡಬೇಡ. ವಿಶೇಷ ಪ್ರಸಂಗ ಬಂದಾಗ ನಮ್ಮ ಸಲಹೆಗಳನ್ನು ಕೇಳಿಕೊಳ್ಳಬಹುದು. ನಾವು ಇನ್ನು ಮುಂದೆ ವಿರಿಂಚಿ ಅಗ್ರಹಾರಕ್ಕೆ ಹೋಗುವೆವು. ಅಪ್ಪಣೆ ಕೊಡು, ಎಂದು ಕೇಳಿದರು. ಆಗ ರಾಜನು ಪುನಃ ಪುನಃ ದೊಡ್ಡವರಿಗೆ ಹಿಂದೆ ಕೊಡಬಾರದೆಂದು ಅವರಿಗೆ ಉಚಿತ ಮನ್ನಣೆಯನ್ನು ಮಾಡಿ ಶಿಷ್ಯಪರಿವಾರದೊಡನೆ ಊರಿಗೆ ಹೋಗಲು ಅಪ್ಪಣೆಕೊಟ್ಟನು. ದೀಕ್ಷಿತರು ಸಪರಿವಾರವಾಗಿ ವಿರಿಂಚೀ ಅಗ್ರಹಾರಾಭಿಮುಖವಾಗಿ ತೆರಳಿದರು.

ದೀಕ್ಷಿತರು ಊರಿಗೆ ಹೊರಟ ಸುದ್ದಿಯು ತಾತಾಚಾರ್ಯರಿಗೆ ಗೊತ್ತಾಯಿತು. ರಾಜನು ತಮಗೆ ಬುದ್ಧಿವಾದವ ಹೇಳಿದ್ದನ್ನು ಅವರು ಮರೆತು ಬಿಟ್ಟರು. ಅಪ್ಪಯ್ಯದೀಕ್ಷಿತರ ಮೇಲೆ ಅವರಿಗೆ ಬಹಳ ಕೋಪ. ಈ ಬ್ರಾಹ್ಮ

ಣನು ಜೀವದಿಂದಿರುವವರೆಗೆ ನನಗೆ ಸೌಖ್ಯವಾಗದೆಂದು ಅವರು ಖಂಡಿತ ತಿಳಿದಿದ್ದರು. ಹ್ಯಾಗಾದರೂ ಮಾಡಿ ಇವರ ಇಹಲೋಕಯಾತ್ರೆಯನ್ನು ಮುಗಿಸಿಬಿಡಬೇಕೆಂದು ದುಷ್ಟ ವಿಚಾರಗಳು ಉತ್ಪನ್ನವಾದವು. ಮನುಷ್ಯನಿಗೆ ಎಲ್ಲ ಬಗೆಯಿಂದ ಕೈಕಟ್ಟಿ ಬಂದರೆ ಕೊನೆಗೆ ಅವನು ಪ್ರತಿಪಕ್ಷಿಯ ಪ್ರಾಣಹರಣದಂಥ ಘಾತುಕ ಯೋಚನೆಗಳನ್ನು ಮಾಡುವನು. ಸ್ವಸುಖಕ್ಕಾಗಿ-ಸ್ವಪ್ರತಿಷ್ಠೆಗಾಗಿ ಆತನು ಆ ನೀಚಕಾರ್ಯಕ್ಕೆ ಪ್ರವೃತ್ತನಾಗಲು ಅಂಜುವದಿಲ್ಲ. ಧರ್ಮಾಧರ್ಮಗಳನ್ನು ಸ್ವಲ್ಪವೂ ವಿಚಾರಿಸುವದಿಲ್ಲ. ಇಂಥ ಅನ್ಯಾಯಕ್ಕೆ ಕೈಹಾಕಿದರೆ ಪರಮೇಶ್ವರನ ದಂಡ ಶಕ್ತಿಯು ಶಿಕ್ಷೆ ವಿಧಿಸುವದರ ಕಡೆಗೆ ಹಣಿಕಿ ಸಹ ನೋಡುವದಿಲ್ಲ. ಇದರಂತೆ ಪ್ರಸ್ತುತದಲ್ಲಿ ತಾತಾಚಾರ್ಯರ ಸ್ಥಿತಿಯೂ ಆಗಿತ್ತು. ಅವರು ವಿದ್ವತ್ತಿನಿಂದ ದೀಕ್ಷಿತರನ್ನು ಪರಾಜಯಗೊಳಿಸಲು ಪ್ರಯತ್ನ ಮಾಡಿದರು. ಸಾಧ್ಯವಾಗಲಿಲ್ಲ. ಘೋರೋಪಾಯಗಳನ್ನು ಕಲ್ಪಿಸಿ ನೋಡಿದರು; ಪ್ರಯೋಜನವಿಲ್ಲದಹೋಯಿತು. ರಾಜನಿಗೆ ಹೇಳಿ ದೇಶಭ್ರಷ್ಟರನ್ನಾಗಮಾಡಿ ಕಳಿಸಬೇಕೆಂದು ಹವಣಿಸಿದರು. ಅದೂ ಕೈಗೂಡದಹೋಯಿತು. ಕೊನೆಗೆ ರಾಜನು ತಮ್ಮ ಮಂಗಳಾರತಿಯನ್ನೇ ಮಾಡಿದ್ದರಿಂದ ಆಚಾರ್ಯರಿಗೆ ವಿಲಕ್ಷಣ ಸಂತಾಪವಾಗಿ ವಿವೇಕವನ್ನು ಬಿಟ್ಟು ದೀಕ್ಷಿತರ ಪ್ರಾಣಹರಣಮಾಡಬೇಕೆಂದು ಬಗೆದರು. ಹಾ! ಸ್ವಾರ್ಥವೇ, ನಿನ್ನಿಂದ ಪ್ರಪಂಚದಲ್ಲಿ ಏನು ಆಗುವದಿಲ್ಲವಲ್ಲ!! ಹಾಯ್! ಹಾಯ್!!

ಆಚಾರ್ಯರು ಏಕಾಂತಪ್ರದೇಶದಲ್ಲಿ ದಂಡನಾಯಕನನ್ನು ಕರೆಯಿಸಿದರು. ಮತ್ತು ರಹಸ್ಯವಾಗಿ ಈಗ ದೀಕ್ಷಿತರು ವಿರಂಚೀಪುರದ ಕಡೆಗೆ ಪ್ರಯಾಣ ಬೆಳೆಯಿಸಿದ್ದಾರೆ; ನೀನು ನಿನ್ನ ಸೈನಿಕರಲ್ಲಿ ಕೆಲವರನ್ನು ಕಳುಹಿಸಿ ಮಾರ್ಗದಲ್ಲಿ ದೀಕ್ಷಿತರ ಶಿರಸ್ಸನ್ನು ಕಡಿಸು. ಘಟನೆಯು ನನಗೆ ತಿಳಿಯದಂತೆಮಾಡಿದರೆ ನಿನಗೆ ನಾನು ಇದುವರೆಗೆ ಸಂಪಾದಿಸಿದ ಸಂಪತ್ತನ್ನೆಲ್ಲ ಕೊಟ್ಟುಬಿಡುವೆನು. ಈ ಕೆಲಸ ನೀನು ಮಾಡಲೇಬೇಕು. ನಿನಗೆ ಅಪಾಯವಾಗುವದಿಲ್ಲ, ಎಂದು ನುಡಿದರು. ದಂಡನಾಯಕನು ಮೊದಮೊದಲು ಒಪ್ಪಿಕೊಳ್ಳಲಿಲ್ಲ. ಕೊನೆಗೆ ಅವನಿಗೂ ಅಪಾರಸಂಪತ್ತು ಸಿಗುವದೆಂಬ ಆಶೆಹುಟ್ಟಿ ಬಂದಿತು. ಏನೇ ಆಗಲಿ, ಈ ಕೆಲಸ ಮಾಡಿಬಿಡೋಣವೆಂದು ನಿಶ್ಚಯಿಸಿ ಆಚಾರ್ಯರಿಗೆ ವಚನಕೊಟ್ಟನು. ದಂಡನಾಯ್ಕನು ಒಪ್ಪಿಕೊಂಡದ್ದರಿಂದ ಆಚಾರ್ಯರ ತಳಮಳವು ಅರ್ಧಕ್ಕರ್ಧ ಕಡಿಮೆಯಾಯಿತು. ಅವರು ಆ ಶುಭವಾರ್ತೆಯನ್ನು ಯಾವಾಗ ಕೇಳುವೆನೋ ಎಂದು ಮಾರ್ಗನಿರೀಕ್ಷಣೆಮಾಡುತ್ತ ರಾಜಾಜ್ಞೆಯಂತೆ ಕಾಂಚೀನಗರಕ್ಕೆ ಹೊರಟುಹೋದರು.

ಇತ್ತ ದಂಡನಾಯಕನು ಐದುನೂರುಜನ ರಾಹುತರನ್ನು ಕರೆದು ಅವರಿಗೆ ರಹಸ್ಯವಾಗಿ ತಿಳಿಸಬೇಕಾದ ಸಂಗತಿಯನ್ನು ತಿಳಿಸಿ ಮುಂದೆ ಕಳುಹಿಸಿಕೊಟ್ಟನು. ಅಪ್ಪಯ್ಯದೀಕ್ಷಿತರು ಒಮ್ಮೆಲೆ ವಿರಂಚಿಅಗ್ರಹಾರಕ್ಕೆ ಹೋಗದೆ ಚಿದಂಬರಕ್ಷೇತ್ರಕ್ಕೆ ಹೋಗಿ ಕನಕಸಭಾಪತಿಯ ದರ್ಶನಮಾಡಿಕೊಂಡು ತಮ್ಮ ಗ್ರಾಮದಕಡೆಗೆಹೊರಟಿದ್ದರು. ದಾರಿಯಲ್ಲಿ ದಂಡನಾಯಕನು ಅವರನ್ನು ನೋಡಿದನು; ಆಗ ಅತನಿಗೆ ತುಂಬಾ ಆಶ್ಚರ್ಯವಾಯಿತು. ದೀಕ್ಷಿತರವರ ಬಳಿಯಲ್ಲಿ ಅವರ ಐದುನೂರುಜನ

ಶಿಷ್ಯರಲ್ಲದೆ ಐನೂರುನೂರು ಜನ ಸೈನಿಕರಿದ್ದರು. ಆ ಸೈನಿಕರೆಲ್ಲರೂ ವೃಷಭಾರೂಢರಾಗಿ ತ್ರಿಶೂಲಾಯುಧವನ್ನು ಧರಿಸಿದ್ದರು. ಆ ಸೈನಿಕರನ್ನು ನೋಡಿ ದಂಡನಾಯಕನಿಗೆ ಭಯವುಂಟಾಯಿತು. ಅವನು ಹಾಗೆಯೇ ಅವರ ಹಿಂದಿನಿಂದ ಸಾಗಿದನು. ದೀಕ್ಷಿತರು ರಾತ್ರಿಯಲ್ಲಿ ವಸತಿಯನ್ನು ಮಾಡಿದಾಗ ಆ ಸೈನಿಕರಲ್ಲಿಯಾರೂ ಕಾಣಿಸುತ್ತಿರಲಿಲ್ಲ; ಆಗ ಪಲ್ಲಕ್ಕಿಯಲ್ಲಿ ದೀಕ್ಷಿತರೂ ಕಾಣಿಸುತ್ತಿರಲಿಲ್ಲ. ದೀಕ್ಷಿತರು ಪ್ರಯಾಣಾಭಿಮುಖರಾದರೆಂದರೆ ಮಾತ್ರ ಸೈನಿಕರು ಅವರ ಪಲ್ಲಕ್ಕಿಯ ಪಹರೆಯನ್ನು ಮಾಡುತ್ತಿದ್ದರು.

ಈ ಸಂಗತಿಯು ದಂಡನಾಯ್ಕನಿಗೆ ತುಂಬಾ ಆಶ್ಚರ್ಯವನ್ನುಂಟು ಮಾಡಿತು. ದೀಕ್ಷಿತರು ಅಮಾನುಷ ಸಂಭೂತರಿರುವದರಿಂದ ಅವರ ಮೇಲೆ ಮನುಷ್ಯಮಾತ್ರರ ಆಟ ಸಾಗದೆಂದು ಅವನಿಗೆ ನಂಬಿಗೆಯಾಯಿತು. ತಾನು ಆಚಾರ್ಯರ ಮಾತಿಗೆ ಮರುಳಾಗಿ ಅಂಥ ಮಹಾನುಭಾವರ ಮೇಲೆ ದಂಡೆತ್ತಿ ಬಂದದ್ದಕ್ಕಾಗಿ ಅವನಿಗೆ ತುಂಬಾ ಪಶ್ಚಾತ್ತಾಪವಾಯಿತು. ಅವನು ಆಚಾರ್ಯರ ಕುಯುಕ್ತಿಗೆ ಬಲಿಯಾಗಿ ದಂಡು ಕೊಟ್ಟದ್ದಲ್ಲದೆ ತನ್ನ ದ್ರವ್ಯಾಭಿಲಾಷೆಗೂ ಆಸಕ್ತನಾಗಿದ್ದನು. ಮನುಷ್ಯನು ದ್ರವ್ಯಕೊಟ್ಟರೆ ಬೇಕಾದಂಥ ಹೇಯ ಕೆಲಸ ಮಾಡುವನು. ಅಂಥ ನನ್ನ ದ್ರವ್ಯಲಾಲಸೆಗೆ ಧಿಕ್ಕಾರವಿರಲೆಂದು ಅಂದುಕೊಂಡನು. ದೀಕ್ಷಿತರ ಊರಹದ್ದಿನವರೆಗೆ ದಂಡನಾಯ್ಕನು ಹೋದನು. ಅಲ್ಲಿಯವರೆಗೆ ತ್ರಿಶೂಲಧಾರಿ ಸೈನ್ಯವು ಇದ್ದೇ ಇತ್ತು. ದೀಕ್ಷಿತರು ಊರಬಳಿಯಲ್ಲಿ ಪಲ್ಲಕ್ಕಿಯನ್ನು ಇಳಿಸಿದ ಕೂಡಲೆ ಆ ಸೈನ್ಯವು ಮಾಯವಾಯಿತು. ಇದನ್ನು ಕಂಡು ದಂಡನಾಯಕನು ಪಶ್ಚಾತ್ತಾಪಪಟ್ಟು ದೀಕ್ಷಿತರ ಬಳಿಗೆ ಹೋಗಿ ನಡೆದುದನ್ನು ಮತ್ತು ಆಚಾರ್ಯರ ದುರ್ಬುದ್ಧಿಯನ್ನೂ ಹೇಳಿಕೊಂಡನು ಮತ್ತು ಅಪರಾಧಿಯಾದ ನನ್ನನ್ನು ಕ್ಷಮಿಸಬೇಕೆಂದು ಅಂಗಲಾಚಿ ಬೇಡಿಕೊಂಡನು. ಆಗ ದೀಕ್ಷಿತರು ನಕ್ಕು ತಮ್ಮಾ, ಅಂಜಬೇಡ. ನನ್ನಿಂದ ನಿನಗೆ ಯಾವ ರೀತಿಯ ಉಪಹತಿಯೂ ಆಗದು. ಇನ್ನು ಮೇಲೆ ಹೀಗೆ ಮಾತ್ರ ದ್ರವ್ಯಕ್ಕೋಸ್ಕರವಾಗಿ ಅನ್ಯರ ಪ್ರಾಣಾಪಹರಣಕ್ಕೆ ಮನಸ್ಸು ಮಾಡಬೇಡ. ನಿನ್ನ ಬಳಿ ಯುದ್ಧದ ಪ್ರಸಕ್ತಿ ಇಲ್ಲದಿರುವಾಗ ಯಾವ ಜನರಿಗೂ ಹಿಂಸೆಕೊಡಬೇಡ ಎಂದು ಬೋಧಿಸಿ ಅವನಿಗೆ ಫಲಮಂತ್ರಾಕ್ಷತೆಗಳನ್ನು ಕೊಟ್ಟು ಕಳುಹಿಸಿದರು. ದಂಡನಾಯ್ಕನು ದೀಕ್ಷಿತರ ಘನತರವಾದ ದಯಾಗುಣವನ್ನು ಕೊಂಡಾಡುತ್ತ ಪಾಳಯಕ್ಕೆ ತೆರಳಿದನು.

ಇತ್ತ ದೀಕ್ಷಿತರು ವಿರಂಚಿ ಅಗ್ರಹಾರದ ಊರಮುಂದಿರುವ ಶಿವಾಲಯಕ್ಕೆ ಹೋಗಿ ಬಿಲ್ವಪುಷ್ಪಗಳಿಂದ ಶಿವನಿಗೆ ಪುಷ್ಪಾಂಜಲಿ ಸಮರ್ಪಿಸಿ ಶಿವದರ್ಶನ ಪಡೆದು ಭಕ್ತಿಯಿಂದ ಗಾಢಸಾಷ್ಟಾಂಗನಮಸ್ಕಾರವನ್ನು ಮಾಡಿದರು. ದೀಕ್ಷಿತರು ದಿಗ್ವಿಜಯವನ್ನು ಮಾಡಿ ಗ್ರಾಮಕ್ಕೆ ಸುಖಕ್ಷೇಮದಿಂದ ಬಂದದ್ದಕ್ಕಾಗಿ ವಿರಂಚಿಪುರದ ನಿವಾಸಿಗಳೆಲ್ಲರೂ ಆನಂದಪ್ರದರ್ಶನವನ್ನು ಮಾಡಿದರು. ಊರಲ್ಲೆಲ್ಲ ಉತ್ಸವಗಳೂ ನಡೆದವು.

ಹೀಗೆ ಪರಿಂಚಿಅಗ್ರಹಾರದಲ್ಲಿ ಆನಂದೋತ್ಸವಗಳು ನಡೆದಿರಲು ಇತ್ತ ತಾತಾಚಾರ್ಯರು ಕಾಂಚಿಯನ್ನು ಮುಟ್ಟಿ ಒಂದು ದಿನ ಸಾಯಂಕಾಲದಲ್ಲಿ ವರದರಾಜಸ್ವಾಮಿಯ ದರ್ಶನ ಮಾಡಿಕೊಂಡು ಸಂಧ್ಯಾಕಾರ್ಯಗಳನ್ನು ಮಾಡುವದಕ್ಕಾಗಿ ಪುಷ್ಕರಿಣಿಯ ಕಡೆಗೆ ಹೊರಟರು. ಕೆಲವು ಕಾರ್ಯಗೌರವಕ್ಕಾಗಿ ಅವರ ಶಿಷ್ಯರಿಬ್ಬರು ಅವರಬಳಿಗೆ ಬಂದರು. ಆಚಾರ್ಯರು ಅವರೊಡನೆ ಮಾತನಾಡುತ್ತ ಹೆಬ್ಬಾಗಿಲ ಬಳಿಯಲ್ಲಿ ನಿಂತುಕೊಂಡರು. ಪರಮೇಶ್ವರನು ಪ್ರತಿಯೊಂದು ಪ್ರಾಣಿಯ ಕರ್ಮಗಳಿಗೆ ಸಾಕ್ಷಿಯಾಗಿದ್ದಾನೆ. ಸತ್ಕರ್ಮಿಗಳಿಗೆ ಸತ್ಫಲವನ್ನೂ ದುಷ್ಕರ್ಮಿಗಳಿಗೆ ದುಷ್ಫಲವನ್ನೂ ತಪ್ಪದೆ ಕೊಡುತ್ತಿರುವನು. ಈ ಈಶ್ವರೀ ಕಾಯಿದೆಯು ಅಖಂಡವಾಗಿ ನಡೆಯುತ್ತಬಂದಿದ್ದರೂ ಅದರ ಕಡೆಗೆ ಯಾವ ಮಾನವನೂ ಲಕ್ಷ್ಯಗೊಡುವದಿಲ್ಲ. ತನಗೆ ತಿಳಿದಹಾಗೆ ತಮ್ಮ ಹಿತವನ್ನು ಸಾಧಿಸಿಕೊಳ್ಳಬೇಕೆಂದು ಆತುರಪಡುವರು. ಆದರೆ ಸರ್ವಸಾಕ್ಷಿಯಾದ ಪರಮೇಶ್ವರನು ಮಾನವರ ಈ ಆತುರವನ್ನು ಹ್ಯಾಗೆ ಸಾಗಗೊಡುವನು? ಜಗತ್ತು ದೈವತಂತ್ರದಿಂದ ನಡೆದಿರುವದೇ ಹೊರತು ಮನುಷ್ಯರ ತಂತ್ರಗಳಿಂದ ನಡೆದಿರುವದಿಲ್ಲ. ಮನುಷ್ಯನು ಇದರಲ್ಲಿ ಯಾವ ಹೆಚ್ಚುಕಡಿಮೆಗಳನ್ನೂ ಮಾಡಲಾರನು. ಆದರೆ ಅಹಂಮನ್ಯರಾದ ಅಜ್ಞಾನಿಗಳಾದ ನಾವು ಜಗತ್ತಿನಲ್ಲಿ ವಿಲಕ್ಷಣ ಕ್ರಾಂತಿಯನ್ನೆಬ್ಬಿಸಬೇಕೆಂದು ಸಾಹಸಪಡುತ್ತೇವೆ. ರಾಜಕೀಯ ಗೊಂದಲವನ್ನೆಬ್ಬಿಸುತ್ತೇವೆ. ಧಾರ್ಮಿಕಗೊಂದಲವನ್ನೆಬ್ಬಿಸುತ್ತೇವೆ ನಮ್ಮ ಮತಶ್ರೇಷ್ಠ, ನಮ್ಮ ಶ್ರೇಷ್ಠವೆಂದು ಗಲಭೆಯನ್ನೆಬ್ಬಿಸುತ್ತೇವೆ ಆದರೆ ಇವುಗಳಲ್ಲಿ ಒಂದನ್ನೂ ಮಾಡಲಿಕ್ಕೆ ನಮ್ಮಿಂದಾಗುವದಿಲ್ಲ. ಮತಕ್ರಾಂತಿಯಾಗಲಿ, ರಾಜ್ಯಕ್ರಾಂತಿಯಾಗಲಿ, ದೈವತಂತ್ರದಿಂದಲೇ ಆಗುತ್ತಿರುವವು ಜನತೆಯ ಅಜ್ಞಾನದೋಷದಿಂದ ಒಂದು ಮತಸಿದ್ಧಾಂತದ ಅತಿರೇಕವಾಗಿ ಈಶ್ವರೀ ನಿಯಮಕ್ಕೆ ಬಾಧೆಬರಹತ್ತಿತೆಂದರೆ ಜನತೆಯ ಅಜ್ಞಾನನಿವಾರಣೆಗಾಗಿ ಪರಮಾತ್ಮನು ಬೇರೊಂದು ಉಪಾಯ ಕಲ್ಪಿಸುವನು. ಅದರಂತೆ ವರ್ತಿಸುವಲ್ಲಿ ಜನತೆಯ ಅಜ್ಞಾನದೋಷದಿಂದ ಮತ್ತೆ ಅಪರಾಧಗಳು ಸಂಭವಿಸಹತ್ತಿದರೆ ಪರಮಾತ್ಮನು ಮೂರನೆಯದೊಂದು ಉಪಾಯವನ್ನು ಯೋಚಿಸುವನು. ಹೀಗೆ ಸೃಷ್ಟಿಯು ಇರುವವರೆಗೆ ಪರಮಾತ್ಮನ ಉಪಾಯಗಳು ನಡೆಯುತ್ತಲೇ ಇರುವವು. ಈ ಉಪಾಯಾಂತರಗಳಿಗೇ ನಾವು ಮತಸ್ವರೂಪ ಕೊಟ್ಟು ಜಗತ್ತೇ ನಗುವ ಹಾಗೆ ಒಡಿದಾಡುವೆವು. ಈ ಬಡಿದಾಟದ ಸಲುವಾಗಿಯೇ ತಾತಾಚಾರ್ಯರ ಹೆಸರು ಇತಿಹಾಸಪ್ರಸಿದ್ಧವಾಯಿತು. ಇರಲಿ.

ಶಿಷ್ಯರೊಡನೆ ಮಾತಾಡುತ್ತ ನಿಂತ ತಾತಾಚಾರ್ಯರ ಮೇಲೆ ದೈವ ಕ್ಷೋಭವು ವಿಶೇಷವಾಗಿತ್ತು. ಅವರ ಸ್ವಾರ್ಥಪರಾಯಣತೆಯಿಂದ ವರದರಾಜ ಸ್ವಾಮಿಗೆ ತುಂಬಾ ಅಸಹ್ಯವಾಗಿತ್ತೆಂದು ಹೇಳಬಹುದು; ಅಥವಾ ಆಗಿನಕಾಲಕ್ಕೆ ಆಚಾರ್ಯರ ಆಯುಸ್ಸೂತ್ರವು ಹರಿಯಿತೆಂದು ಹೇಳಬಹುದು. ಇಲ್ಲವೆ ಅವರ ತಂತ್ರಗಳ ಫಲವು ಅವರಿಗೆ ಸಿಗುವ ಸಮಯವು ಪ್ರಾಪ್ತವಾಯಿತೆಂದು ಹೇಳಬಹುದು. ಆಚಾರ್ಯರು ನಿಂತನಿಂತಿರುವ ಹಾಗೆ ಗೋಪುರದ ಮೇಲೆ ಅಡ್ಡಾಡುವ ಒಂದು ಮಂಗವು ಗೋಪುರದ ಒಂದು ಕಲ್ಲನ್ನು ಕಿತ್ತು ಗುರಿನೋಡಿ ಬಿಟ್ಟಂತೆ ಕೆಳಗೆ ದಬ್ಬಿಕೊಟ್ಟಿತು. ಅದು ಆಚಾರ್ಯರವರ ತಲೆಯ ಮೇಲೆ ಬಿದ್ದದರಿಂದ ಅವರ ತಲೆಯು ಒಡೆದು ಕೂಡಲೆ ಅವರ ಪ್ರಾಣೋತ್ಕ್ರಮಣವಾಯಿತು. ಶಿಷ್ಯರು ಗಾಬರಿಯಾಗಿ ಕೆಳಗೆಬೀಳುವ ಆಚಾರ್ಯರ ಕಳೇವರವನ್ನು ಹಿಡಿಯುತ್ತಿರಲು, ಅದು ಅವರ ಕೈಗೆ ಸಿಗದೆ, ನೆಲದ ಮೇಲೆ ಬಿದ್ದುಕೊಂಡಿತು. ಕೂಡಲೆ ಹಾಹಾಕಾರವುಂಟಾಗಿ ಅಲ್ಲಿ ಬಹು ಜನರು ನೆರೆದರು.

ತಾತಾಚಾರ್ಯರ ಪ್ರಾಣೋತ್ಕ್ರಮಣವಾದಾಗ ಅಪ್ಪಯ್ಯದೀಕ್ಷಿತರು ತಮ್ಮ ಮನೆಯಲ್ಲಿದ್ದರು. ಅವರು ಹೊರಗೆ ಬಂದು ಆಚಾರ್ಯರ ನಿರ್ಯಾಣವನ್ನು ಜ್ಞಾನದಿಂದ ತಿಳಿದು ತಮ್ಮ ಪತಿಯನ್ನು ಕರೆದು-ತಾತಾಚಾರ್ಯರು ಮರಣಹೊಂದಿದರು. ನೀನು ಸ್ನಾನಮಾಡು, ಎಂದು ಹೇಳಿ ತಾವೂ ಸ್ನಾನಮಾಡಿ ಆಚಾರ್ಯರ ಮರಣದಿಂದುಂಟಾದ ಸೂತಕವನ್ನು ಕಳೆದುಕೊಂಡರು. ಆಚಾರ್ಯರು ತಮ್ಮನ್ನು ಈ ವಿಧವಾಗಿ ಪೀಡಿಸಿದ್ದರೂ, ತಮ್ಮ ಪ್ರಾಣಹರಣಕ್ಕೆ ಉಪಾಯಾಂತರಗಳನ್ನು ಕಲ್ಪಿಸಿದ್ದರೂ ದೀಕ್ಷಿತರು ಅವರ ವಿಷಯವಾಗಿ ಸ್ವಲ್ಪಾದರೂ ಮತ್ಸರಬುದ್ಧಿಯನ್ನು ತಾಳಿದ್ದಿಲ್ಲ. ನಿಜವಾದ ಬ್ರಹ್ಮನಿಷ್ಠರಾದ ಅವರಲ್ಲಿ ಮತ್ಸರದ ಗಾಳಿ ಕೂಡಾ ಸುಳಿದಾಡುವಂತಿರಲಿಲ್ಲ. ಇಂಥವರಿಗೇ ನಿಜವಾದ ಮತಪ್ರವರ್ತಕರೆನ್ನಬೇಕು. ಇರಲಿ.

ಬಳಿಕ ದೀಕ್ಷಿತರು ಕೃಷ್ಣದೇವರಾಜನ ಬಳಿಗೆ ಶಿಷ್ಯನನ್ನು ಕಳುಹಿಸಿ ನೀನು ಇನ್ನು ಈ ಪ್ರಾಂತದಲ್ಲಿರಕೂಡದು. ವಿಜಯನಗರಕ್ಕೆ ಶೀಘ್ರವಾಗಿ ಹೊರಟು ಹೋಗು; ಮತ್ತು ನೀನು ತಮ್ಮನ ಮಗನಾದ ಸದಾಶಿವನಿಗೆ ರಾಜ್ಯವನ್ನೊಪ್ಪಿಸಿ ನೀನು ಈಶ ಚಿಂತನದಲ್ಲಿ ಕಾಲಕ್ರಮಣಮಾಡು ಎಂದು ಆಜ್ಞಾಪಿಸಿದರು. ತಾತಾಚಾರ್ಯರಿಗೆ ಮರಣವುಂಟಾದದ್ದನ್ನು ಕೇಳಿ ರಾಜನು ಮಹಾಪುರುಷರ ನಿಂದೆಯ ಫಲವು ತೀವ್ರ ಪರಿಣಾಮಕಾರಿಯಾದದ್ದೆಂದುಭಾವಿಸಿ ದೀಕ್ಷಿತರ

ವಿಷಯವಾಗಿ ಭಯಭಕ್ತಿಗಳನ್ನು ತಾಳಿದನು. [illegible] ದ್ದೊಂದೇ ತಡ; ಸಸೈನ್ಯವಾಗಿ ವಿಜಯನಗರಕ್ಕೆ [illegible] ಸದಾಶಿವ ನಿಗೆರಾಜ್ಯವನ್ನೊಪ್ಪಿಸಿ ಅಧ್ಯಾತ್ಮ [illegible] ರಂಭಿಸಿದನು.

ವಿಜಯನಗರದ ಪ್ರಜೆಗಳು ಸುಖ [illegible] ವೈಷ್ಣವ ಪಂಡಿತರು ಸರಿಯಾಗಿ [illegible] ಇದು ಅಪ್ಪಯ್ಯ ದೀಕ್ಷಿತರ ಪುಣ್ಯದ ಫಲವೆಂದು ಆಸ್ಥಾನದ [illegible] ಕೊಂಡಾಡಿದರು. ಕೆಲವರು ದೈವತಂತ್ರವು ಯಾರಿಗೂ [illegible] ಸ್ಥಿತಿ ಯಿದ್ದು, ಮಧ್ಯದಲ್ಲಿ ತಾತಾಚಾರ್ಯರು [illegible] ವಿದ್ಯೆಗೆ ರಾಜನು ಮೆಚ್ಚಿ ಪ್ರಜೆಗಳ [illegible] ದೈವ ತಂತ್ರವೇಸರಿ! ತಾತಾಚಾರ್ಯರ [illegible] ತ್ವವನ್ನು ಸ್ವೀಕರಿಸುವದಕ್ಕೂ ಯಾವ ದೈವತಂತ್ರವು [illegible] ದೈವತಂತ್ರ ದಿಂದಲೇ ಅಪ್ಪಯ್ಯದೀಕ್ಷಿತರಿಂದ [illegible] ವಾಡಿಸಿ ತಾತಾಚಾರ್ಯರ ಅಹಂಕಾರವನ್ನು ಕಡಿಮೆ [illegible] ತಾತಾಚಾರ್ಯರು ದೀಕ್ಷಿತರಿಗೆ ಅವಮಾನ ಮಾಡಬೇಕೆಂದು [illegible] ಪ್ರಯತ್ನಿಸಿದರೂ ಅದೆಲ್ಲ ದೈವತಂತ್ರದಿಂದಲೇ ವ್ಯರ್ಥ [illegible] ಚಾರ್ಯರಿಗೆ ಅಕಲ್ಪಿತವಾಗಿ ಮರಣವುಂಟಾದದ್ದು [illegible] ಎಂದು ಮಾತ ನಾಡುತ್ತಿದ್ದರು.

ಪ್ರಿಯವಾಚಕರೇ ನಮ್ಮ ಈ [illegible] ಸೃಷ್ಟಿಯಲ್ಲಿ ಯಾವ ಮಹತ್ಕಾರ್ಯಗಳು ಜರಗಿ [illegible] ಜರಗುತ್ತ ವೆಂಬದು ಈ ಕಥಾನಕದಿಂದ ಸ್ಪಷ್ಟ [illegible] ದ ಮನು ಷ್ಯರಾದ ನಾವು ಯಾವ ವಿಷಯದಲ್ಲಿಯೂ [illegible] ಷ್ಟವನ್ನು ಬಗೆ ಯದೆ ಈಶ್ವರಸ್ಮರಣೆಯಿಂದ ಕರ್ತವ್ಯ [illegible] ನಮ್ಮ ಶ್ರೇಯ ಸ್ಸಿಗೆ ಸಾಧನವಾಗಿದೆ.

[illegible] ಸಂಪೂರ್ಣ [illegible]